# ಶ್ರೀ ರಾಮಚಂದ್ರ ಮಿಷನ್
# ಎಖೋಸ್ ಇಂಡಿಯ

ನವೆಂಬರ್ 2009 | ಆಂತರಿಕ ಪ್ರಸಾರಕ್ಕಾಗಿ ಮಾತ್ರ | ಸಂಪುಟ 2 ಸಂಚಿಕೆ 6


ಪ್ರೀತಿಯ ಸೋದರಿಯರೆ, ಸೋದರರೆ

ಪ್ರಣಾಮಗಳು,

ಇಖೋಸ್ ಇಂಡಿಯಾದ ಸದಸ್ಯತ್ವ ಹಾಗು ವ್ಯಾಪಕತೆಗಳ ಹೆಚ್ಚಳವು ನಮಗೆ ಬಹು ಸಂತಸ ತಂದಿದೆ. ಈ ಸಂಚಿಕೆಗಾಗಿ ಬಹುತೇಕ ವಲಯಗಳಿಂದ ಅನೇಕ ಲೇಖನಗಳು ಬಂದಿವೆ. ಜುಲೈ 2009ರ ತಿರುಪ್ಪೂರಿನ ನಮ್ಮ ಸ್ವಯಂಸೇವಕರ ಸಭೆಯ ನಂತರ ಲೇಖನಗಳ ಗುಣಮಟ್ಟ ಹಾಗು ವಿಷಯ ವೈವಿಧ್ಯತೆಗಳು ಉತ್ತಮಗೊಂಡಿವೆ. ಸ್ಥಳದ ಮಿತಿಯಿಂದಾಗಿ ಲೇಖನಗಳ ಆಯ್ಕೆಯು ಕಷ್ಟಕರವಾಗಿದೆ.

ಈ ಸಂಚಿಕೆಯು ಪೂಜ್ಯ ಗುರುಗಳ ಆಂಧ್ರ ಪ್ರದೇಶ, ಉತ್ತರ ಕರ್ನಾಟಕ ಮತ್ತು ಪ.ಬಂಗಾಲಗಳ ಪ್ರವಾಸ ವಿವರಗಳನ್ನೊಳಗೊಂಡಿದೆ. ಕೊಲ್ಕತದ ಬಳಿಯ ಖರಗಪುರದಲ್ಲಿ 2ನೆಯ ಕ್ರೆಸ್ಟ್ ಉದ್ಘಾಟನೆಯು ಈ ಸಂಚಿಕೆಯ ವಿಶೇಷತೆಯಾಗಿದೆ. ಚೆನ್ನೈನ ಮಣಪಾಕ್ಕಂ ಆಶ್ರಮವು ದೀಪಾವಳಿಯಿಂದ ಸಂಭ್ರಮೋಪೇತವಾಗಿತ್ತು.

ಅನೇಕ ತರಬೇತಿ ಕಾರ್ಯಕ್ರಮಗಳು, ಅನೇಕ ವಲಯಗಳಲ್ಲಿ ಮುಕ್ತ ಸಭೆಗಳು, ಬೆಂಗಳೂರಿನಲ್ಲಿ ಯುವಜನತೆಗಾಗಿ ಕಾರ್ಯಕ್ರಮ, ವಲಯ ಸಮಾವೇಶಗಳು, ಜೈಪುರ ಮತ್ತು ಎರ್ನಾಕುಲಂನಲ್ಲಿ VBSE ಕಾರ್ಯಕ್ರಮಗಳು ಉತ್ತರಾಖಂಡ್‌ನಲ್ಲಿ ಪ್ರಶಿಕ್ಷಕರ ಸಭೆ ಇವೆಲ್ಲವೂ ಈ ಸಂಚಿಕೆಯಲ್ಲಿ ಅಡಕವಾಗಿವೆ. 'ಜ್ಯೋತಿಕೇಂದ್ರ' ವಿಭಾಗದಲ್ಲಿ ಪನ್‌ವೆಲ್ ಆಶ್ರಮದ ಚಿತ್ರಣವಿದೆ.

ವಾರ್ತಾಪತ್ರಕ್ಕೆ ಅವಕಾಶವಿಲ್ಲದ ನಿಮ್ಮ ಕುಟುಂಬ ಅಥವ ನೆರೆಹೊರೆಯ ಸೋದರ ಸೋದರಿಯರಿಗೆ ಈ ಪತ್ರವನ್ನು ದೊರಕಿಸಿರಿ ಹಾಗೂ ಅವರಿಗಾಗಿ ವಾಚಿಸಿರಿ.


ಗೌರವಾದರಗಳೊಂದಿಗೆ

ಪ್ರಕಟಣಾ ತಂಡ

## ಚಿತ್ತೂರು

ಸೆಪ್ಟೆಂಬರ್ 13ರಂದು ಮಧ್ಯಾಹ್ನ ಪೂಜ್ಯ ಗುರುಗಳು ಸ. ಅಜಯ್ ಭಟ್ಟರ್‌ರವರೊಂದಿಗೆ ಆಂಧ್ರ ಪ್ರದೇಶ ಮತ್ತು ಉತ್ತರ ಕರ್ನಾಟಕದ ಪ್ರವಾಸಕ್ಕಾಗಿ ಚೆನ್ನೈನಿಂದ ರಸ್ತೆ ಮಾರ್ಗವಾಗಿ ಪಯಣಿಸಿದರು.

ಚಿತ್ತೂರು ಆಶ್ರಮದಲ್ಲಿ 1000ಕ್ಕೂ ಮೀರಿ ಅಭ್ಯಾಸಿಗಳು ಅವರಿಗೆ ಆದರದ ಸ್ವಾಗತ ಬಯಸಿದರು. ಮೂರು ಗಂಟೆಗಳ ಪ್ರವಾಸದ ನಂತರವೂ ಗುರುಗಳು ಸಂತಸ ಹಾಗು ಹರ್ಷಚಿತ್ತರಾಗಿ ಕಂಡರು. ಅವರು ಆಗಮಿಸಿದ ಅಲ್ಪ ಸಮಯದಲ್ಲಿ ಸ್ವಲ್ಪ ಮಳೆಯಾಗಿ ಆಶ್ರಮದ ಪ್ರಶಾಂತತೆಯನ್ನು ವರ್ಧಿಸಿತು. ಗುರುಗಳು, ತಮ್ಮ ಕುಟೀರದ ಹೊರಾಂಗಣದಲ್ಲಿ ಸಂಜೆ 5 ಗಂಟೆಗೆ ಸತ್ಸಂಗಗಳಿರುವುವೆಂದು ತಿಳಿಸಿದರು. ಇದು ನಂತರದ ಎಲ್ಲ ಸ್ಥಳಗಳಲ್ಲೂ ರೂಢಿಯಾಯಿತು.








ಸೆಪ್ಟೆಂಬರ್ 14ರಂದು ಬೆಳಿಗ್ಗೆ ಅಲ್ಲಿ ನೆರೆದಿದ್ದವರಿಗೆಲ್ಲ ಅನೌಪಚಾರಿಕ ಸಂವಾದದಿಂದ ಮುದ ನೀಡಿದರು. ಅವರೆಂದರು, ಆಧ್ಯಾತ್ಮಿಕತೆಯಲ್ಲಿ ಭವಿಷ್ಯವೆಂಬುದಿಲ್ಲ. ನಾನೇನಾಗಬೇಕೆಂಬುದನ್ನು ಬಯಸುವುದರಿಂದ ನಾವೇ ನಮ್ಮ ಭವಿಷ್ಯ ನಿರ್ಮಿಸುತ್ತೇವೆ. ...ಜನರು ಸ್ಥೂಲ ಸ್ತರದಲ್ಲಿ ಬೆಳೆಯಬೇಕೆಂದು ಆಶಿಸುವುದು ದುರಂತವೇ ಸರಿ. ಅಲ್ಲಿ ಸಾಧ್ಯತೆಗಳ ಮಿತಿ ಇರುತ್ತದೆ. ಆಧ್ಯಾತ್ಮಿಕ ಸ್ತರದಲ್ಲಿ ಸಾಧ್ಯತೆಗಳು ಅನಂತ. ...ನಾವು ಸಂಗತಿಗಳನ್ನು ಸರಿಯಾಗಿ ಅರ್ಥಮಾಡಿಕೊಳ್ಳಬೇಕು ಧ್ಯಾನವು ನಮ್ಮಲ್ಲಿ ಶಿಸ್ತನ್ನು ಉಂಟುಮಾಡುತ್ತದೆ. ಶುದ್ಧೀಕರಣವು ನಮ್ಮನ್ನು ಸಿದ್ಧಪಡಿಸುತ್ತದೆ. ಪ್ರಾಣಾಹುತಿಯು ನಾವು ಉನ್ನತಿ ಹೊಂದಲು ನೆರವಾಗುತ್ತದೆ. ಪ್ರಶಿಕ್ಷಕರು ಈ ಎಲ್ಲವುಗಳ ಬಗ್ಗೆ ತಿಳಿಸಿಕೊಡಬೇಕು. ಅವರು ಹಾಗೆ ಮಾಡುವುದು ವಿರಳ.





ಅವರ ಕುಟೀರದ ಹೊರಗೆ ಮೌನವಾಗಿ ಕಾಯುತ್ತಿದ್ದ ಅಭ್ಯಾಸಿಗಳ ಆನಂದಕ್ಕೆ ಪಾರವಿಲ್ಲದಂತೆ ಅವರು ರಾತ್ರಿ 8.45ಕ್ಕೆ ಭೋಜನಾನಂತರ ಹೊರಗಡೆ ಕುಳಿತರು. ನಂತರ ಅವರು ಸುಮಾರು ಅರ್ಧ ಗಂಟೆ ಕಾಲ ನಮ್ಮ ಮರು ಮೌಲ್ಯ ನಿರ್ಣಯದ ಅಗತ್ಯ ಮತ್ತು ಭವಿಷ್ಯದೆಡೆಗೆ ಚಲಿಸಲು ನಮ್ಮನ್ನು ಪಾತ್ರರನ್ನಾಗಿಸುವ ಬಗ್ಗೆ ಮಾತನಾಡಿದರು. (http://www.sahajmarg.org/literature/online/speeches/reappraiseyourself) ಸೆಪ್ಟೆಂಬರ್ 15ರಂದು ಗುರುಗಳು ಕಡಪಕ್ಕೆ ಪ್ರಯಾಣ ಮಾಡಿದರು.

ಸುಮಾರು ಮಧ್ಯಾಹ್ನ ವೇಳೆಗೆ ಅವರು ಕಡಪ ತಲುಪಿದಾಗ ಸುಮಾರು 1500 ಅಭ್ಯಾಸಿಗಳಿಗೂ ಮೀರಿ ಸ್ಥಳಾವಕಾಶವಿರುವ ಹೊಸ ಧ್ಯಾನ ಮಂದಿರವು ಸುಂದರವಾಗಿ ಅಲಂಕರಿಸಲ್ಪಟ್ಟ ಆಶ್ರಮದ ಪ್ರಾಂಗಣದಲ್ಲಿ (3 ಎಕರೆ 30 ಸೆಂಟ್) ಕಂಗೊಳಿಸುತ್ತಿತ್ತು. ಗುರುಗಳು ಆಗಮಿಸಿ ಧ್ಯಾನ ಮಂದಿರವನ್ನು ಉದ್ಘಾಟಿಸಿ ಸಂಜೆ 4.30ಕ್ಕೆ ಸತ್ಸಂಗ ನಡೆಸಿದರು. ತಮ್ಮ ಶಿಶುಗಳಿಗೆ ನಾಮಕರಣ ಮಾಡಲು ಅವರನ್ನು ಹಲವು ಅಭ್ಯಾಸಿಗಳು ವಿನಂತಿಸಿದಾಗ ಜಾತಿಯ ಹೆಸರುಗಳನ್ನು ಸೇರಿಸುವುದಿಲ್ಲವೆಂದು ತಮಗೆ ಆಶ್ವಾಸನೆ ನೀಡಿದರೆ ಮಾತ್ರ ನಾಮಕರಣ ಮಾಡುವುದಾಗಿ ಗುರುಗಳು ಹೇಳಿದರು.

ಸೆಪ್ಟೆಂಬರ್ 16ರಂದು ಆ ಸಣ್ಣ ಕೇಂದ್ರದಲ್ಲಿ ನೆರೆದಿದ್ದ ಶ್ಲಾಘನೀಯ ಕೆಲಸ ಮಾಡಿದ ಸ್ವಯಂ ಸೇವಕರ ತಂಡವನ್ನು ಆಶೀರ್ವದಿಸಿ ನಂದ್ಯಾಲಕ್ಕೆ ಪ್ರಯಾಣ ಮಾಡಿದರು.

ಶ್ರೀ ರಾಮಚಂದ್ರ ಮಿಷನ್
ಎಖೋಸ್ ಇಂಡಿಯ
ಗುರುಗಳ ಪ್ರವಾಸ
ನವೆಂಬರ್ 2009 ಆಂತರಿಕ ಪ್ರಸಾರಕ್ಕಾಗಿ ಮಾತ್ರ ಸಂಪುಟ 2 ಸಂಚಿಕೆ 6


ನಂದ್ಯಾಲ




ಕರ್ನೂಲ್

ಇದು ನಂದ್ಯಾಲಕ್ಕೆ ಗುರುಗಳ ಮೊದಲ ಭೇಟಿ. ರಾಜ್ಯದ ವಿವಿಧ ಭಾಗಗಳಿಂದ ಬಂದಿದ್ದ 2000 ಮೀರಿದ ಅಭ್ಯಾಸಿಗಳು ಅವರನ್ನು ಸ್ವಾಗತಿಸಿದರು. ಗುರುಗಳ ಕುಟೀರದ ಕಾಲುದಾರಿಯ ಇಕ್ಕೆಲಗಳಲ್ಲಿ ಪುಷ್ಪ ಭರಿತ ಗಿಡಗಳ ಸಾಲು. ಗುರುಗಳು ಮೊದಲು ತಮ್ಮ ಕುಟೀರವನ್ನು ಉದ್ಘಾಟಿಸಿ ನಂತರ ಪಕ್ಕದಲ್ಲಿದ್ದ ಧ್ಯಾನ ಮಂದಿರಕ್ಕೆ ತೆರಳಿ ಟೇಪು ಕತ್ತರಿಸಿ ಅನಾವರಣ ಮಾಡಿದರು. ಮರು ಬೆಳಿಗ್ಗೆ ಅಭ್ಯಾಸಿಯ ಕುಟುಂಬವು ನಡೆಸುತ್ತಿರುವ ವಿದ್ಯಾ ಸಂಸ್ಥೆಯೊಂದಕ್ಕೆ ಭೇಟಿ ನೀಡಿದರು. ಮುಂದಿನ ಭೇಟಿಯು ನಂದ್ಯಾಲ್‌ನಿಂದ ಸುಮಾರು 90 ನಿಮಿಷಗಳ ಪಯಣದ ಕರ್ನೂಲ್ ಆಗಿದ್ದಿತು.

ಗುರುಗಳು ಬೆಳಿಗ್ಗೆ 11.30ಕ್ಕೆ ಕರ್ನೂಲ್ ತಲುಪಿದರು. ಆಗಮಿಸಿದ ಕೂಡಲೆ ಅವರು ಧ್ಯಾನ ಮಂದಿರವನ್ನು ಉದ್ಘಾಟಿಸಿ ಅದನ್ನು ಪೂಜ್ಯ ಬಾಬೂಜಿ ಮಹಾರಾಜರಿಗೆ ಅರ್ಪಣೆ ಮಾಡಿದರು. ನಂತರ 1500ಕ್ಕೂ ಮೀರಿ ಅಭ್ಯಾಸಿಗಳು ಪಾಲ್ಗೊಂಡ ಸತ್ಸಂಗ ನಡೆಸಿದರು. ಧ್ಯಾನ ಮಂದಿರದ ಕಟ್ಟಡದ ಭಾಗವಾಗಿರುವ ಅವರ ಕುಟೀರವನ್ನು ನಂತರ ಅವರು ಉದ್ಘಾಟಿಸಿದರು. ತಮ್ಮ ಕುಟೀರಕ್ಕೆ ತೆರಳುವಾಗ ಯಾರೊ ಒಬ್ಬರು ಆಶ್ರಮವು ಬಹು ಚೆನ್ನಾಗಿದೆ ಎಂದರು. ಗುರುಗಳು ಸ್ಪಂದಿಸಿ ಎಲ್ಲ ಆಶ್ರಮವು ಬಹು ಚೆನ್ನಾಗಿದೆ ಎಂದರು. ಚೆನ್ನಾದ ಆಶ್ರಮಗಳನ್ನು ಯಾರು ಬೇಕಾದರೂ ಕಟ್ಟಬಹುದು, ಆದರೆ ತಮಗೆ ಹೆಚ್ಚು ಜನ ಒಳ್ಳೆಯ ಅಭ್ಯಾಸಿಗಳು ಬೇಕೆಂದರು.

ಗುರುಗಳು ತಮ್ಮ ಕುಟೀರದ ಹೊರಗೆ ಕುಳಿತು ಅಭ್ಯಾಸಿಗಳೊಂದಿಗೆ ಮಾತನಾಡಿದರು.

ಅವರೆಂದರು, ಈ ಕಾಲದಲ್ಲಿ ಮಗುವಿಗೆ ವಿರಾಮದ ಅಗತ್ಯವಿರುವಂತೆಯೇ ಜನರಿಗೂ ವಿರಾಮದ ಅಗತ್ಯವಿದೆ. ಮಹಾಭಾರತದಲ್ಲಿ ಧೃತರಾಷ್ಟ್ರನ ಮಾತನ್ನು ಉದ್ಧರಿಸಿ ಗುರುಗಳು, ನಿದ್ರೆಯು ನಮಗೆ ಅಗತ್ಯವಿರುವಾಗ ಬರುವುದಿಲ್ಲ. ಅದು ತಾನಾಗಿ ಬಂದಾಗ ನಾವು ನಿದ್ರಿಸಬೇಕು ಎಂದರು. 5000 ಅಭ್ಯಾಸಿಗಳಲ್ಲಿ ಹಾಳು ಮಾಡಲು 50 ಅಭ್ಯಾಸಿಗಳು ಸಾಕು ಎಂದು ಗುರುಗಳು ನುಡಿದರು. ಅವರು, ಬೃಹತ್ ಹಾಲಿನ ಪಾತ್ರೆಯಲ್ಲಿ ಹಲವೇ ತೊಟ್ಟು ವಿಷ ಬೆರೆಸುವ ನಿದರ್ಶನ ನೀಡಿದರು.

ಅಭ್ಯಾಸಿಯೊಬ್ಬರು 16 ವರ್ಷದ ಮಕ್ಕಳು ಸಾಧನೆ ಆರಂಭಿಸುವ ಬಗ್ಗೆ ವಿವರಣೆ ಕೇಳಿದರು. ಗುರುಗಳು ಸೂಕ್ತ ಕಾಲಕ್ಕೆ, ಎಂದರೆ 18 ವರ್ಷಕ್ಕೆ ಕಾಯಬೇಕೆಂದರು. ಅವರು, ಸುಖವಿವಾಹದ ದಂಪತಿಗಳನ್ನು ನೋಡಿ ಹನ್ನೆರಡು ವರ್ಷದ ಮಗುವು ತಾನೂ ವಿವಾಹವಾಗ ಬಯಸಿದಂತಾಗುತ್ತದೆ, ಅದಕ್ಕೆ ಅನುಮತಿ ಇಲ್ಲ ಎಂದರು. ಎಲ್ಲಕ್ಕೂ ಸೂಕ್ತವೇಳೆ ಇರುತ್ತದೆ.

18ರಂದು ಬೆಳಿಗ್ಗೆ 7.30ಕ್ಕೆ ಗುರುಗಳು ಸತ್ಸಂಗ ನಡೆಸಿ ನಂತರ ಗದ್ವಾಲ್ ಮುಖಾಂತರ ಕರ್ನಾಟಕದ ರಾಯಚೂರಿಗೆ ಪ್ರಯಾಣ ಮಾಡಿದರು; ಅಲ್ಲಿ(ಗದ್ವಾಲ) ಅವರ ದರ್ಶನ ಲಾಭಕ್ಕಾಗಿ ಕಾಯುತ್ತಿದ್ದ ಅಭ್ಯಾಸಿಗಳಿಗೆ ಆನಂದವಾಗುವಂತೆ ಸ್ವಲ್ಪಕಾಲ ನಿಂತರು. ಸುಮಾರು 2ಗಂಟೆ 30 ನಿಮಿಷಗಳು ಪ್ರಯಾಣ ಮಾಡಿ ರಾಯಚೂರು ತಲುಪಿದರು. ಕಡೆಯ ಒಂದು ಗಂಟೆಯ ಪ್ರಯಾಣವು ಕಿರುದಾರಿಯಾಗಿದ್ದು ಕಳೆದ ಹಲವು ವಾರಗಳ ಮಳೆಯಿಂದಾಗಿ ಬಹು ತ್ರಾಸದಾಯಕವಾಗಿತ್ತು.

ರಾಯಚೂರು ಆಶ್ರಮವು 1970ರಲ್ಲಿ ಬಾಬೂಜಿ ಮಹಾರಾಜರಿಂದ ಉದ್ಘಾಟಿಸಲ್ಪಟ್ಟಿದ್ದು, ಮಿಷನ್ನಿನ ಹಳೆಯ ಆಶ್ರಮಗಳಲ್ಲೊಂದಾಗಿದೆ. ಗುರುಗಳದು ಈ ಆಶ್ರಮಕ್ಕೆ 22 ವರ್ಷಗಳ ನಂತರ ಭೇಟಿ. ಆಗಮಿಸಿದಾಗ ಕರ್ನಾಟಕದ ಕೇಂದ್ರಗಳಿಂದ ನೆರೆದಿದ್ದ ಸುಮಾರು 1500 ಅಭ್ಯಾಸಿಗಳು ಅವರನ್ನು ಸ್ವಾಗತಿಸಿದರು. ಧ್ಯಾನ ಮಂದಿರದ ಕಟ್ಟಡದ ಭಾಗವಾದ ಅವರ ಕುಟೀರದ ಭಾಗವನ್ನು ಅವರು ಉದ್ಘಾಟಿಸಿದರು.

ಸೆಪ್ಟೆಂಬರ್ 19ರಂದು ಬೆಳಗಿನ ಸತ್ಸಂಗ ಮತ್ತು ಉಪಾಹಾರದ ನಂತರ ಹೈದರಾಬಾದಿಗೆ ಗುರುಗಳು ಪ್ರಯಾಣ ಬೆಳೆಸಿದರು. ಅದು 250ಕಿ.ಮೀ ಪಯಣ. ಸುಮಾರು 100 ಕಿ.ಮೀ ಪ್ರಯಾಣದ ನಂತರ ಅವರು ಮೆಹಬೂಬ್‌ನಗರದಲ್ಲಿ ಅತಿಥಿ ಗೃಹವೊಂದರಲ್ಲಿ ಸ್ವಲ್ಪ ಕಾಲ ವಿಶ್ರಮಿಸಲು ತಂಗಿದರು. ಆದರೆ ಹಾಗಾಗಲಿಲ್ಲ. ಅವರು ವಿರಮಿಸಬೇಕಾದಲ್ಲೇ ಸುಮಾರು 100 ಅಭ್ಯಾಸಿಗಳಿದ್ದರು. ತಮಗಾಗಿ ಕಾಯುತ್ತಿರುವವರಿಗೆ ಗಮನ ನೀಡಬೇಕಾದುದಕ್ಕೆ ತಾವು ಕರ್ತವ್ಯಬದ್ಧರೆಂದು ಗುರುಗಳು ತಿಳಿಸಿದರು. ಅವರು ಹೊರಬಂದು ಅವರಿಗೆ ಬೈಠಕ್ ನೀಡಿದರು ಹಾಗು ಸ್ಥಳೀಯ ಪ್ರಶಿಕ್ಷಕರನ್ನು ಕೇಂದ್ರದ ಬಗ್ಗೆ ವಿಚಾರಿಸಿ, ತಮಗೆ ಸಂತೋಷವಾಯಿತೆಂದು ಅವರನ್ನು ಶ್ಲಾಘಿಸಿದರು. ತದನಂತರ ಪ್ರಯಾಣ ಮುಂದುವರೆಸಿದರು. ಭೋಜನಕ್ಕಾಗಿ ನಿಂತು ಒಟ್ಟು 8 ಗಂಟೆಯ ರಸ್ತೆಯ ಪ್ರಯಾಣದ ನಂತರ ಸಂಜೆ 4.20ಕ್ಕೆ ತುಮುಕುಂಟ ತಲುಪಿದರು. ಮುಖ್ಯ ದ್ವಾರದಿಂದ ಅವರ ಕುಟೀರದವರೆಗೂ ಸಾಲುಗಟ್ಟಿ ಮೌನವಾಗಿ ನಿಂತಿದ್ದ ಅಭ್ಯಾಸಿಗಳು ಅವರಿಗೆ ಪ್ರೇಮಪೂರ್ವಕ ಸ್ವಾಗತ ನೀಡಿದರು. ಚೆನ್ನೈನಿಂದ ದೀರ್ಘ ಪಯಣದ ಆಯಾಸವಿದ್ದರೂ ಗುರುಗಳು ಬಹು ಸಂತಸಭರಿತರಾಗಿ ಕಂಡರು. ಸೆಪ್ಟೆಂಬರ್ 20ರಂದು ಬೆಳಿಗ್ಗೆ ಧ್ಯಾನಮಂದಿರಕ್ಕೆ ಗುರುಗಳು 7.10ಕ್ಕೆ ಆಗಮಿಸಿದರು. 6000ಕ್ಕೂ ಮೀರಿ ಸ್ಥಳಾವಕಾಶವಿರುವ ವಿಶಾಲ ಸಭಾಂಗಣವು ಪೂರ ಭರ್ತಿಯಾಗಿರುವುದನ್ನು ಹಲವು ನಿಮಿಷಗಳು ಆಹ್ಲಾದಭರಿತರಾಗಿ ವೀಕ್ಷಿಸಿದರು.

ರಾಯಚೂರು





ಮೆಹಬೂಬ್‌ನಗರ







ಸಭಾಂಗಣವು ಭಂಡಾರದ ಪರಿಸರದಂತಿದ್ದಿತು. ರಾಜ್ಯದ ವಿವಿಧ ಕೇಂದ್ರಗಳು ಹಾಗು ನೆರೆಯ ರಾಜ್ಯಗಳಿಂದಲೂ ಜನರು ನೆರೆದಿದ್ದರು. ಅವರಲ್ಲಿ ಬಹು ಮಂದಿಗೆ ಪ್ರತಿಯೊಂದರಲ್ಲಿ 800 ಜನ ಹಿಡಿಸುವಂತಹ ಐದು ಬೃಹತ್ ಟೆಂಟುಗಳಲ್ಲಿ ವಸತಿ ವ್ಯವಸ್ಥೆ ಮಾಡಲಾಗಿತ್ತು. ಮಕ್ಕಳೂ ಸೇರಿದಂತೆ ಸುಮಾರು 7000 ಮಂದಿಯು ಆ ಸ್ಥಳದಲ್ಲಿದ್ದರೆಂದು ಅಂದಾಜು ಮಾಡಲಾಯಿತು.

ಸೆಪ್ಟೆಂಬರ್ 21ರಂದು ಬೆಳಿಗ್ಗೆ 7.30ಕ್ಕೆ ಸ. ಅಜಯ್ ಭಟ್ಟರ್‌ರವರು ಸತ್ಸಂಗ ನಡೆಸಿದರು. ಸಂಜೆ ಸ. ಸೌಮ್ಯರವರಿಂದ ಭರತನಾಟ್ಯವಿದ್ದಿತು. ಪೂಜ್ಯ ಗುರುಗಳು ಧ್ಯಾನ ಮಂದಿರಕ್ಕೆ ಬಂದು ಯಶೋದೆಯು ತನ್ನ ಪ್ರಿಯ ಪುತ್ರ ಕೃಷ್ಣ ಪರಮಾತ್ಮನಿಗಾಗಿ ಪರಿತಪಿಸುವ ಮಾತೃಪ್ರೇಮವನ್ನು ಚಿತ್ರಿಸುವ ಒಂದು ಗಂಟೆಯ ಪೂರ್ಣ ಕಾರ್ಯಕ್ರಮವನ್ನು ವೀಕ್ಷಿಸಿದರು.

ಸೆಪ್ಟೆಂಬರ್ 22ರಂದು ಬೆಳಿಗ್ಗೆ 10.30ಕ್ಕೆ ಬೀಳ್ಕೊಳ್ಳುವ ವೇಳೆ. ಅಭ್ಯಾಸಿಗಳು ಗುರುಗಳ ವಾಹನದ ದಾರಿಯುದ್ದಕ್ಕೂ ಪ್ರೇಮಭರಿತ ಕೃತಜ್ಞತೆಯುಳ್ಳವರಾಗಿ ಶಿಸ್ತಿನಿಂದ ಸಾಲುಗಟ್ಟಿ ನಿಂತಿದ್ದರು. ಅವರು ನಗರದಲ್ಲಿ ಅಭ್ಯಾಸಿಯೋರ್ವರ ಮನೆಯಲ್ಲಿ ರಾತ್ರಿ ತಂಗಿದರು. ಅದು ವಿಮಾನ ನಿಲ್ದಾಣದಿಂದ 30 ನಿಮಿಷಗಳ ದೂರ. 23ರ ಬೆಳಿಗ್ಗೆ ಕೊಲ್ಕತಕ್ಕೆ ಹೊರಡುವ ಮುನ್ನ ಗುರುಗಳು ನೆಮ್ಮದಿ ಹಾಗೂ ವಿಶ್ರಾಂತಿಯಿಂದ ಕಾಲ ಕಳೆದರು.

ಈ ರೀತಿಯಲ್ಲಿ ನಮ್ಮ ಪ್ರೀತಿ ಪಾತ್ರರ ಆಂಧ್ರಪ್ರದೇಶ, ಕರ್ನಾಟಕ ಪುನಃ ಆಂಧ್ರಪ್ರದೇಶದ 10 ದಿನಗಳ ದೀರ್ಘ ಅಭಿಯಾನವು ಸುಸಂಪನ್ನವಾಯಿತು. ಅವರ ಪ್ರವಾಸವು ಅನುಕಂಪ, ಪ್ರೇಮ, ಬಾಧ್ಯತೆ ಮತ್ತು ತೀವ್ರತೆಗಳ ಸಮನ್ವಯವಾದದ್ದು ಬೇರೆಲ್ಲ ಕಾರ್ಯಗಳ ನಡುವೆ 10 ಪ್ರಶಿಕ್ಷಕರನ್ನು ತಯಾರು ಮಾಡಿದರು. ನಂದ್ಯಾಲದಲ್ಲಿ ಹತ್ತು ವರ್ಷದ ಕಿಶೋರನೊಬ್ಬನು ಬಹು ಪ್ರೀತಿಯಿಂದ, ಇದು ಅವರ ಪ್ರಥಮ ಭೇಟಿಯಾದ್ದರಿಂದ ಇನ್ನೊಂದು ದಿನ ಇರಲಾಗದೆ ಎಂದು ಕೇಳಿದನು. ಗುರುಗಳು ಆಗ ಅವನಿಗೊಂದು ಪ್ರಶ್ನೆ ಮಾಡಿದರು, ವೃದ್ಧನಿಗೆ ಕಡಿಮೆ ಮತ್ತು ಯುವಕನಿಗೆ ಹೆಚ್ಚಾಗಿ ಇರುವುದು ಯಾವುದು? ಬಾಲಕನು ಅನೇಕ ಉತ್ತರಗಳನ್ನು ಪ್ರಯತ್ನಿಸಿದ ಕೊನೆಗೆ ಗುರುಗಳು, 'ಕಾಲ' ಎಂದು ಅವನಿಗೆ ಹೇಳಿದರು. ಅವರೆಂದರು, ನೀನಿನ್ನೂ ಬಾಲಕ, ಸಾಕಷ್ಟು ಕಾಲವಿದೆ, ನಾನು ವೃದ್ಧ, ಆದ್ದರಿಂದ ಕಡಿಮೆ ವೇಳೆಯಲ್ಲಿ ಮಾಡಬೇಕಾದ ಬಹು ಕೆಲಸಗಳಿವೆ. ಆದ್ದರಿಂದ ನಾನು ಕರ್ನೂಲಿಗೆ ಹೋಗ ಬೇಕು. ಈ ಶೀಘ್ರತೆಯ ಭಾವವು ಪ್ರವಾಸದ ಪೂರ್ಣ ಅವಧಿಯಲ್ಲಿ ಪ್ರಮಾಣಿತವಾಯಿತು ಎಂಬುದನ್ನು ಬೇರೆಯಾಗಿ ಹೇಳುವ ಅಗತ್ಯವಿಲ್ಲ.

## ಕೊಲ್ಕತ್ತ

23ರಂದು ಗುರುಗಳು ಆಗಮಿಸಿ ನೇರವಾಗಿ ಆಶ್ರಮ ತಲುಪಿದರು. ಆಂಧ್ರ–ಕರ್ನಾಟಕಗಳ ಪ್ರವಾಸದ ರಸ್ತೆ ಪಯಣದ ನಂತರ ದಿನವೆಲ್ಲ ವಿಶ್ರಾಂತಿ ಪಡೆದರು. 24ರ ಸಂಜೆ ಮತ್ತು 25ರ ಬೆಳಿಗ್ಗೆ ಗುರುಗಳು ಸತ್ಸಂಗ ನಡೆಸಿದರು. 26ರಂದು ಸತ್ಸಂಗದ ನಂತರ ಗುರುಗಳು ಸುಮಾರು 40 ಮಂದಿಯ, ಭಾರತದಲ್ಲಿ ಪ್ರಥಮ ಶಿಕ್ಷಣಾರ್ಥಿ ತರಬೇತಿ ಕಾರ್ಯಕ್ರಮವನ್ನು ಉದ್ಘಾಟಿಸಿದರು. ಭಾಗವಹಿಸಿದವರಿಗೆ ಆತ್ಮಶೋಧನೆಯ ಭಾವವನ್ನು ಬೆಳೆಸಿಕೊಳ್ಳಲು ಹಾಗು ವಿವೇಕಗಳಿಸಲು ಕರೆ ನೀಡಿದರು. ಕೇವಲ ಬುದ್ಧಿಗಲ್ಲದೆ ಹೃದಯಕ್ಕೆ ಗಮನ ನೀಡಲು ಅವರಿಗೆ ತಿಳಿಸಿದರು (http://www.sahajmarg.org/literature/online/speeches/thespirit.of.inquiry) ಸ. ಬಾಲಸುಬ್ರಮಣ್ಯಂರವರು ಕಲಿಕೆ, ವಿವೇಕ ಮತ್ತು ಗುರುವಿನ ಪ್ರಸ್ತುತತೆಯ ಬಗ್ಗೆ ವೇದಗಳ ವಿಸ್ತಾರ ಉದ್ಧರಣಗಳೊಂದಿಗೆ 'ಸಹಜಮಾರ್ಗದ ನಿಯಮಗಳು' ವಿಚಾರವಾಗಿ ಉಪನ್ಯಾಸ ನೀಡಿದರು.





ಕೊಲ್ಕತ್ತ



ಖರಗಪುರ

## ಖರಗಪುರ

26ರ ಸಂಜೆ ಗುರುಗಳು ಸ. ಅಜಯ್‌ರವರ ಮನೆಗೆ ತೆರಳಿ, ಮರು ಬೆಳಿಗ್ಗೆ ಖರಗಪುರದ ಕ್ರೆಸ್ಟ್‌ಗೆ ಪ್ರಯಾಣ ಮಾಡಿದರು. ಅಲ್ಲಿಗೆ ಬೆಳಿಗ್ಗೆ ಸುಮಾರು 11ಕ್ಕೆ ತಲುಪಿ ಕುಟೀರದಲ್ಲಿ ಕಿರು ವಿಶ್ರಾಂತಿಯ ನಂತರ ಇಡೀ ಪ್ರಾಂಗಣದಲ್ಲಿ ಸುತ್ತಾಡಿದರು. ಅವರು ಧ್ಯಾನ ಮಂದಿರ ಗ್ರಂಥಾಲಯವನ್ನೊಳಗೊಂಡ ಕಛೇರಿ, ನಿರ್ದೇಶಕರ ವಸತಿ ಗೃಹ, ಮತ್ತು ಉಪನ್ಯಾಸಕರ ಕೊಠಡಿಗಳಿಗೆ ಭೇಟಿ ನೀಡಿದರು. ಅವರು ಕೆಲಸದ ಗುಣಮಟ್ಟದ ಮೆಚ್ಚುಗೆಯನ್ನು ಪ್ರಕಟ ಪಡಿಸಿದರು ಹಾಗು ಪಾಕಶಾಲೆಯನ್ನು ಉದ್ಘಾಟಿಸಿದರು, ಕ್ಯಾಂಟೀನ್‌ಗೆ ಭೇಟಿ ನೀಡಿ ಕೊನೆಗೆ ಅತ್ಯಾಧುನಿಕ ಸೌಲಭ್ಯಗಳನ್ನು ಒಳಗೊಂಡ ಬೋಧನಾಮಂದಿರ ತಲುಪಿದರು. ಅವರು ಅಲ್ಲಿ ಕೆಲ ಸಮಯ ಕುಳಿತು ಅನೌಪಚಾರಿಕವಾಗಿ ಮಾತನಾಡಿ ಹೀಗೆಂದರು, "ಕನಿಷ್ಠ ಶಕ್ತಿಯ ಬಳಕೆಯಿಂದ ಗರಿಷ್ಠ ಉತ್ಪಾದನೆಯೇ ಕಾರ್ಯ ಸಾಮರ್ಥ್ಯ. ದೇವರ ವಿವರಣೆಯೆಂದರೆ ಶೂನ್ಯ ಬಳಕೆ ಮತ್ತು ಅಪರಿಮಿತ ಸೃಜನತೆ. ಇದಕ್ಕಾಗಿಯೇ ನಾವೂ ಶ್ರಮಿಸತಕ್ಕದ್ದು."

ತರಬೇತಿ ಕಾರ್ಯಕ್ರಮವು ಬಿಡುವಿಲ್ಲದೆ ಬೆಳಿಗ್ಗೆ 5ರಿಂದ ರಾತ್ರಿ 10ರವರೆಗೆ ಮುಂದುವರಿಯಿತು. ಮಿಷನ್ನಿನಲ್ಲಿ ಸೇವೆ, ಹತ್ತು ನಿಯಮಗಳು ಮತ್ತು ಚಾರಿತ್ರ್ಯ ನಿರ್ಮಾಣ, ಸಹಿಷ್ಣುತೆ ಮತ್ತು ಅನುಕಂಪ, ಪ್ರಸಾರ ಮತ್ತು ಬೋಧಚಿಹ್ನೆ, ಮೂರು ಸದ್ಗುರುಗಳು, ಸಹಜಮಾರ್ಗದ ಮೂಲಗಳು, ನೈತಿಕತೆ ಮತ್ತು ನಡವಳಿಕೆ, ಪರಿವರ್ತನೆ, ನಿರಂತರ ಸ್ಮರಣೆ, SMSF, SMRTI,SRCM & SHPT, ಕೇಂದ್ರವೊಂದನ್ನು ಪರಿಣಾಮಕಾರಿಯನ್ನಾಗಿ ಮಾಡುವುದು ಹೇಗೆ ಮತ್ತು ಮುಕ್ತ ಸಭೆಗಳನ್ನು ಹೇಗೆ ನಡೆಸಬೇಕು ಮುಂತಾದ ವಿಷಯಗಳ ಬಗ್ಗೆ ಉಪನ್ಯಾಸಗಳಿದ್ದವುಒಂದು ಸಂಜೆ ಅಭ್ಯಾಸಿಗಳೊಂದಿಗೆ ಉಪಸ್ಥಿತರಿದ್ದಾಗ ಅವರು ಆಕಾಂಕ್ಷೆಗಳ ನಿರ್ಮೂಲ ಹೇಗೆ ಎಂಬ ಪ್ರಶ್ನೆಗೆ ಸ್ಪಂದಿಸಿ ಹೀಗೆ ನುಡಿದರು, "ನಾವು ಸಣ್ಣ ಸಂಗತಿಗಳಿಂದ ಆರಂಭಿಸಿ ದೊಡ್ಡವುಗಳಿಗೆ ಪ್ರಯತ್ನಿಸಬೇಕು."

ನವೆಂಬರ್ 2009 ಆಂತರಿಕ ಪ್ರಸಾರಕ್ಕಾಗಿ ಮಾತ್ರ ಸಂಪುಟ 2 ಸಂಚಿಕೆ 6



ಗುರುಗಳ ಕುಟೀರ ಆದಲಿತ ವಿಭಾಗ ಊಟ ಮತ್ತು ಅಡುಗೆಕೋಣೆ ವಸತಿವಿಭಾಗ ಧ್ಯಾನಮಂದಿರ

"ನಿಮ್ಮದೇ ಆದ ನಂಬಿಕೆಯ ಪದ್ಧತಿಯೊಂದಿಗೆ ಸತ್ಯ ವಸ್ತುವು ಅದೇನಾಗಿರಬೇಕು, ಏನಾಗಿದೆ ಅಥವ ಏನಾಗಿದ್ದಿತು ಎಂಬುದರ ಹೋಲಿಕೆಯನ್ನು ಪರೀಕ್ಷಿಸುವಲ್ಲಿ ನೀವೆಲ್ಲರೂ ತಲ್ಲೀನರಾಗಬೇಕೆಂದೂ ಮತ್ತು ಅದನ್ನು ಚರ್ಚಿಸಲು, ಅದರ ಬಗ್ಗೆ ಧೈರ್ಯವಾಗಿ, ಮುಕ್ತವಾಗಿ ಮಾತನಾಡಲು ಸಿದ್ಧರಾಗಿ ನೀವು ಬರಲೆಂದು, ಆ ಮೂಲಕ ಈ ಸಂಸ್ಥೆಯ ಅಸ್ತಿತ್ವವನ್ನು ಸಿಂಧುವಾಗಿಸಬೇಕೆಂದು ನಾನು ಬಯಸುತ್ತೇನೆ. ಇದನ್ನು ನಿರ್ಮಿಸಿರುವುದು ಇದಕ್ಕಾಗಿಯೆ ಮತ್ತು ಇದನ್ನು ಇದೇ ರೀತಿ ಬಳಸತಕ್ಕದ್ದು."
(ಕ್ರೆಸ್ಟ್, ಖರಗಪುರ)

ಸೆಪ್ಟೆಂಬರ್ 28ರಂದು ಖರಗಪುರದ ಕ್ರೆಸ್ಟನ್ನು ಧ್ಯಾನ ಮಂದಿರದಲ್ಲಿ ಟೇಪ್ ಕತ್ತರಿಸುವುದರ ಮೂಲಕ ವಿಧ್ಯುಕ್ತವಾಗಿ ಉದ್ಘಾಟಿಸಿದರು. ಸತ್ಸಂಗದ ನಂತರ ಅವರು ಕ್ರೆಸ್ಟ್‌ನ ಧ್ಯೇಯೋದ್ದೇಶಗಳ ಬಗ್ಗೆ ಮಾತನಾಡಿ ಭಗವದ್ಗೀತೆಯೊಂದರ ಬಗ್ಗೆಯೇ ಒಂದು ಕಾರ್ಯಕ್ರಮ ಹಮ್ಮಿಕೊಳ್ಳುವ ತಮ್ಮ ಆಶಯ ವ್ಯಕ್ತಪಡಿಸಿದರು. ನಾವೆಲ್ಲರೂ ಗೀತೆಯನ್ನು ದಿನಕ್ಕೊಂದು ಅಧ್ಯಾಯದಂತೆ ಓದಿ, ಅನ್ವೇಷಿಸಿ ಅದೇನು ಹೇಳುವುದೆಂಬುದನ್ನು ಅರ್ಥ ಮಾಡಿಕೊಳ್ಳಬೇಕೆಂದು ಆಶಯ ವ್ಯಕ್ತಪಡಿಸಿದರು. ಈ ಕ್ರೆಸ್ಟ್ ಬೆಂಗಳೂರಿನದಕ್ಕಿಂತ ಬೇರೆಯಾಗಿದ್ದು, ಅದು ಹೆಚ್ಚಾಗಿ ನೀತಿ ಪಾಲನೆ ಮತ್ತು ನೈತಿಕತೆ ಯ ಬಗ್ಗೆ ಕೇಂದ್ರಿತವಾಗಿರುತ್ತದೆ. (http://www.sahajmarg.org/literature/online/speeches/dare-to-think)



ಆರ್ದ್ರತೆಯ ಹವಾಮಾನ ಹಾಗು ಬಿಡುವಿಲ್ಲದ ಕಾರ್ಯಕ್ರಮಗಳಿದ್ದಾಗ್ಯೂ ಮುಂದಿನ ಎರಡು ದಿನಗಳಲ್ಲಿ ಗುರುಗಳ ಉಪಸ್ಥಿತಿಯಿಂದಾಗಿ ಶಿಕ್ಷಣಾರ್ಥಿಗಳು ಉಲ್ಲಾಸಭರಿತರಾಗಿದ್ದರು. 30ರ ಸಂಜೆ ಗುರುಗಳು ಸಮಾರೋಪ ಉಪನ್ಯಾಸ ನೀಡಿ ಹೀಗೆಂದರು, ಸಂತನ ಗುಣಲಕ್ಷಣಗಳೇನು? ಪ್ರಮುಖವಾದುದೆಂದರೆ ಪರಿಪೂರ್ಣ ಸಮತ್ವ. ನೋವಿರಲಿ ನಲಿವಿರಲಿ, ಬದಲಾಗದು; ಆರೋಗ್ಯ ಅನಾರೋಗ್ಯ, ಬದಲಾಗದು, ಅಂತರಂಗದಲ್ಲಿ ಬಾಹ್ಯದಲ್ಲಿ ಒಂದೇ ರೀತಿ– ಪರಿಪೂರ್ಣ ಸಮತೋಲನ.....ಆದ್ದರಿಂದ ನಾವು ನೆನಪಿಡಬೇಕಾದುದೆಂದರೆ ಈ ಸುಸಂದರ್ಭಗಳು ಎಲ್ಲರಿಗೂ ಲಭ್ಯವಿಲ್ಲ, ಅಥವ ಮತ್ತೆ ಮತ್ತೆ ಬರುವುದಿಲ್ಲ. ನಿಮಗಿದು ದೊರಕಿದೆ, ನನ್ನ ಗುರುಗಳ ಅನುಗ್ರಹವೆಂದು ಭಾವಿಸುತ್ತೇನೆ. ಏನೋ ಒಂದು ನಿಮ್ಮನ್ನಿಲ್ಲಿಗೆ ಕರೆತಂದಿದೆ; ಅದು ನಿಮ್ಮನ್ನಿಲ್ಲಿಯೇ ಇರಿಸಲೆಂದು ಪ್ರಾರ್ಥಿಸಿರಿ – ನಾನೆಂದುದು ಕಲಿಕೆಯು ಮುಂದುವರಿಯಬೇಕು, ಮಾಡುವುದನ್ನು ಮುಂದುವರಿಸಬೇಕು, ಸಾಧನೆ ಮುಂದುವರಿಯಬೇಕು ಎಂಬ ವಿಚಾರ; ಅದು ನಮ್ಮನ್ನೇ ಅವಲಂಬಿಸಿದೆ, ದೇವರನ್ನಲ್ಲ.
(http://www.sahajmarg.org/literature/online/speeches/only-purpose-of life)

ಮರು ಬೆಳಿಗ್ಗೆ ಶಿಕ್ಷಣಾರ್ಥಿಗಳು ಹಾಗೂ ಅಲ್ಲಿದ್ದವರು ಗುರುಗಳೊಂದಿಗೆ ಅವರು ಸುಮಾರು 6 ಗಂಟೆಯ ವೇಳೆ, ಕಾಫಿ ಸೇವನೆಗಾಗಿ ಕುಳಿತಿರುವಾಗ ಪ್ರಾತಃ ಕಾಲದ ಸಮಾವೇಶದ ಲಾಭ ಪಡೆದರು. ತಮ್ಮ ಹಾಸ್ಯ ಭರಿತ ಕತೆಗಳೊಂದಿಗೆ ಅಭ್ಯಾಸಿಗಳನ್ನು ಸುಮಾರು ಅರ್ಧ ಗಂಟೆ ಕಾಲ ಮೂಕವಿಸ್ಮಿತರನ್ನಾಗಿಸಿದರು; ನಂತರ ಖರಗಪುರದಲ್ಲಿ ತಮ್ಮ ವಾಸ್ತವ್ಯವನ್ನು ಸಂಪನ್ನಗೊಳಿಸಿ ಉಪಾಹಾರದ ನಂತರ ಕೊಲ್ಕತಕ್ಕೆ ತೆರಳಿದರು.

## ಚೆನ್ನೈಲ



ಗುರುಗಳು ಅಕ್ಟೋಬರ್ 2ರಂದು ಕೊಲ್ಕತದಿಂದ ತೆರಳಿ ಚೆನ್ನೈನ ಮಣಪಾಕ್ಕಂ ಆಶ್ರಮಕ್ಕೆ ಮಧ್ಯಾಹ್ನ 2ರ ವೇಳೆಗೆ ತಲುಪಿದರು. ಗುರುಗಳ ದೀರ್ಘ ಪ್ರವಾಸದಲ್ಲಿ ರಸ್ತೆಯ ಪ್ರಯಾಣದಲ್ಲಿ ಅನೇಕ ಸ್ಥಳಗಳಿಗೆ ಭೇಟಿ ನೀಡಿದುದರಿಂದಾಗಿ ದಣಿದಂತೆ ತೋರುತ್ತಿದ್ದರು.

ದೀಪಾವಳಿಗೆ ಮುನ್ನ ಗುರುಗಳು ವಿಶ್ರಾಂತಿಯೊಂದಿಗೆ ಒಂದು ವಾರ ಕಳೆದರು. ಅಕ್ಟೋಬರ್ 11ರ ಭಾನುವಾರದಿಂದ ಅಭ್ಯಾಸಿಗಳು ಬರಲಾರಂಭಿಸಿದರು. ಆಡಳಿತಾತ್ಮಕ ಕಾರ್ಯಗಳಿಂದ ಕಾರ್ಯೋದ್ಯುಕ್ತರಾಗಿದ್ದರೂ ಸಹ ಅವರ ದ್ವಾರವನ್ನು ಕಟಕಟಿಸುತ್ತಿದ್ದ ಅಭ್ಯಾಸಿಗಳ ಭೇಟಿಗಾಗಿ ಕಾಲಾವಕಾಶವಿರುತ್ತಿದ್ದಿತು.

ಅಕ್ಟೋಬರ್ 16ರಂದು ಶುಕ್ರವಾರ ಗುರುಗಳು ಬೇಕರಿ ವಿಭಾಗವನ್ನು (ರುಚಿ ಬೇಕರಿ) ಉದ್ಘಾಟಿಸಿದರು. ಅವರು ತಮ್ಮ ಗಾಲ್ಫ್ ವಾಹನದಲ್ಲಿ ಪಾಕಶಾಲೆಗೆ ಹೋದಾಗ ಅವರ ದರ್ಶನಕ್ಕಾಗಿ ನೂರಾರು ಅಭ್ಯಾಸಿಗಳು ದಾರಿಯ ಇಕ್ಕೆಲಗಳಲ್ಲೂ ನೆರೆದಿದ್ದರು. ಹಲವು ಆಗತಾನೇ ತಯಾರಾದ ಉತ್ಪನ್ನಗಳನ್ನು ರುಚಿನೋಡಿ, ಸ್ಥಳದಲ್ಲಿಯೇ ಮಾರಾಟಮಾಡಿ ಕಾರ್ಯಕ್ಕೆ ವಿಧ್ಯುಕ್ತ ಚಾಲನೆ ನೀಡಿದರು.

ಅಕ್ಟೋಬರ್ 17ರ ಶನಿವಾರದಂದು ದೀಪದ ಹಬ್ಬ ದೀಪಾವಳಿ. ಗುರುಗಳು ಬೆಳಿಗ್ಗೆ ಬಹು ಬೇಗ ಸಿದ್ಧರಾಗಿದ್ದರು. ಬೆಳಗಿನಿಂದಲೇ ಗುರುಗಳನ್ನು ಭೇಟಿ ಮಾಡಲು ಅಭ್ಯಾಸಿಗಳು ಕಾಯುತ್ತಿದ್ದುದು ಕಂಡು ಬಂದಿತು. ಗುರುಗಳು ತಾಳ್ಮೆಯಿಂದ ಅವರಲ್ಲಿ ಅನೇಕರನ್ನು ಭೇಟಿ ಮಾಡಿ ಹಬ್ಬದ ಶುಭಾಶಯ ಹಂಚಿಕೊಂಡರು.

5000ಕ್ಕೂ ಮೀರಿದ್ದ ಅಭ್ಯಾಸಿಗಳ ಸಂಗದಲ್ಲಿ ಗುರುಗಳು ಬೆಳಗಿನ ಸತ್ಸಂಗ ನಡೆಸಿದರು. ಗುಜರಾತಿನ ಅಭ್ಯಾಸಿಗಳು ಸಂಜೆ ಗರ್ಬಾ ನೃತ್ಯ ಆಯೋಜಿಸಿದ್ದರು. ಗುರುಗಳು ಅರ್ಧ ಗಂಟೆಯ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದು ಕಲಾವಿದರನ್ನು ಅವರ ಪ್ರದರ್ಶನಕ್ಕೆ ಅಭಿನಂದಿಸಿದರು. ಕುಟೀರವು ವಿದ್ಯುದ್ದೀಪ ಮತ್ತು ಹಣತೆಗಳಿಂದ ಅಲಂಕೃತವಾಗಿ ಕಿನ್ನರಲೋಕದಂತಿದ್ದಿತು. ಅಲ್ಲಿ ನಿಜವಾದ ಹಬ್ಬದ ವಾತಾವರಣವಿದ್ದು ಗುರುಗಳು ತಮ್ಮೊಂದಿಗೆ ಉಪಸ್ಥಿತರಾಗಿದ್ದುದರ ಲಾಭ ಪಡೆದು ಅಭ್ಯಾಸಿಗಳು ಧನ್ಯರಾದರು..

ಶ್ರೀ ರಾಮಚಂದ್ರ ಮಿಷನ್
ಎಖೋಸ್ ಇಂಡಿಯ



ನವೆಂಬರ್ 2009 ಆಂತರಿಕ ಪ್ರಸಾರಕ್ಕಾಗಿ ಮಾತ್ರ ಸಂಪುಟ 2 ಸಂಚಿಕೆ 6

## ಅಭ್ಯಾಸಿ ತರಬೇತಿ ಕಾರ್ಯಕ್ರಮಗಳು(ATP)

"ನಾವಿಲ್ಲಿರುವುದು ನಿಮ್ಮ ಕುತೂಹಲವನ್ನು ಪೋಷಿಸಲು ಅಥವ ಉತ್ತೇಜಿಸಲು ಅಲ್ಲ. ನಾವಿಲ್ಲಿರುವುದು ಬಾಬೂಜಿಯವರೆಂದಂತೆ 'ಆತ್ಮಶೋಧನೆ'ಗಾಗಿ (I-N-Q-U-I-R-Y). ವಸ್ತು ವಿಷಯಗಳೊಳಕ್ಕೆ, ಆ ವಸ್ತು ವಿಷಯಗಳ ಸ್ವಭಾವದೊಳಕ್ಕೆ, ಜೀವನ ಶೈಲಿಯ ಹಿಂದಿರುವ ತತ್ವದಾಳದೊಳಕ್ಕೆ ಅನ್ವೇಷಿಸುವ ಚೈತನ್ಯಭರಿತ ಆತ್ಮಶೋಧನೆಗಾಗಿ."

ಪಿ. ರಾಜಗೋಪಾಲಾಚಾರಿ, ಕೊಲ್ಕತ, ಸೆಪ್ಟೆಂಬರ್ 26, 2009.

ಸಹಜಮಾರ್ಗದ ನವಪ್ರವೇಶಿಕರುಗಳಿಗೆ ದೇಶದಾದ್ಯಂತ ಅನೇಕ ತರಬೇತಿ ಕಾರ್ಯಕ್ರಮಗಳು ಹಾಗೂ ಮುಕ್ತ ಸಭೆಗಳನ್ನು ಏರ್ಪಡಿಸಲಾಗುತ್ತಿದೆ. ಪ್ರಶಿಕ್ಷಕರು ಹಾಗೂ ಅನುಭವಿಗಳೂ ತಮ್ಮ ಅನುಭವ ಹಾಗೂ SMRTI ತರಬೇತಿ ಸಾಮಗ್ರಿಗಳಿಂದ ನವ ಅಭ್ಯಾಸಿಗಳ ಮನಸ್ಸನ್ನು ಉದ್ದೀಪನಗೊಳಿಸುವುದರಿಂದಾಗಿ ಗುರಿಯನ್ನು ತಲುಪಲು ಉತ್ತೇಜಿಸುತ್ತಿದ್ದಾರೆ.

SMRTI ಹಂತ–1 ತರಬೇತಿ ಕಾರ್ಯಕ್ರಮವು ಸಾಧನೆಯ ಬಗ್ಗೆ ಹೊಸ ಅಭ್ಯಾಸಿಗಳಿಗೆ ಮೂಲಭೂತವಾದ ಹಾಗೂ ಕ್ರಮಬದ್ಧ ಮಾಹಿತಿಯನ್ನೂ ಒದಗಿಸುತ್ತದೆ. ವಿವಿಧ ಮೂಲಗಳಿಂದ ಸಂಗ್ರಹಿಸಿರುವ ಸಹಜಮಾರ್ಗ ಸಾಧನೆಯ ಪ್ರಮುಖ ಅಂಶಗಳ ಬಗ್ಗೆ ನಮ್ಮ ಪೂಜ್ಯ ಗುರುಗಳ ಶ್ರವಣ ಹಾಗೂ ದೃಶ್ಯ ಮಾಧ್ಯಮಗಳ ತುಣುಕುಗಳ ಪ್ರದರ್ಶನವೂ ಇರುತ್ತದೆ. ಆಗಸ್ಟ್, ಸೆಪ್ಟೆಂಬರ್ ಹಾಗೂ ಅಕ್ಟೋಬರ್ ತಿಂಗಳಿನಲ್ಲಿ ನಡೆಸಿರುವ ವಿವಿಧ ತರಬೇತಿ ಕಾರ್ಯಕ್ರಮಗಳ ಮತ್ತು ಕಾರ್ಯಾಗಾರಗಳ ಈ ವರದಿಯು ಭಾರತ ಪೂರಾ, ಸಂಸ್ಥೆಯಲ್ಲಿ ನಡೆಯುತ್ತಿರುವ ಚಟುವಟಿಕೆಯ ತೀವ್ರತೆಯ ಒಂದು ಸಮಗ್ರ ಚಿತ್ರಣವನ್ನು ನೀಡುತ್ತದೆ. ಪ್ರಪ್ರಥಮವಾಗಿ ಕನ್ನಡದಲ್ಲಿ ಅಭ್ಯಾಸಿ ತರಬೇತಿ ಕಾರ್ಯಕ್ರಮವು ಕರ್ನಾಟಕದಲ್ಲಿರುವ ಮುಳಬಾಗಿಲು ಎಂಬಲ್ಲಿ ಸೆಪ್ಟೆಂಬರ್ 6ರಂದು ನಡೆಯಿತು. ಇದನ್ನು ಬೆಂಗಳೂರಿನ ಸೋದರ ವಿಶ್ವನಾಥ್ ಮತ್ತು ಸೋದರಿ ವಿಜಯಲಕ್ಷ್ಮಿ ಅವರು ನಡೆಸಿಕೊಟ್ಟರು. 50 ಅಭ್ಯಾಸಿಗಳ ಗುಂಪಿನಲ್ಲಿ ಸುತ್ತಮುತ್ತಲಿನ ಹತ್ತಿರದ ಕೇಂದ್ರಗಳಾದ ಮಾಲೂರು, ಕೋಲಾರ ಮತ್ತು ಕೆಜಿಎಫ್ಗಳಿಂದ ಬಂದವರೂ ಸೇರಿದ್ದರು. ಕಾರ್ಯಕ್ರಮವು ಬಹಳಷ್ಟು ಅಭ್ಯರ್ಥಿಗಳಿಂದ ಉತ್ಸಾಹಪೂರಿತ ಪ್ರತಿಕ್ರಿಯೆಯಿಂದ ಬಹಳ ಚೆನ್ನಾಗಿ ಸ್ವೀಕರಿಸಲ್ಪಟ್ಟಿತು.

ಒರಿಸ್ಸಾದ ರೂರ್ಕೆಲಾ ಕೇಂದ್ರದಲ್ಲಿ ಸೆಪ್ಟೆಂಬರ್ 13ರಂದು ಒಂದು ATP ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಈ ಕಾರ್ಯಕ್ರಮದಲ್ಲಿ 22 ಅಭ್ಯಾಸಿಗಳು ಹಾಜರಿದ್ದರು. ಕಾರ್ಯಕ್ರಮದ ಮುಕ್ತಾಯಕ್ಕೆ ಮೊದಲು ಒಂದು ಪ್ರಶ್ನೋತ್ತರ ಸಮಾವೇಶವೇರ್ಪಡಿಸಲಾಗಿತ್ತು. ಸಾಧನೆಯ ಬಗ್ಗೆ ಅಭ್ಯಾಸಿಗಳಿಗೆ ತಮ್ಮ ಸಂಶಯ ನಿವಾರಿಸಿಕೊಳ್ಳಲು ಇದರಿಂದ ಸಹಾಯವಾಯಿತು.

11ನೇ ಅಕ್ಟೋಬರ್ ಉತ್ತರ ಕರ್ನಾಟಕದ ಗುಲ್ಬರ್ಗಾ ಜಿಲ್ಲೆಯ ಚಿತ್ತಾಪುರ ಕೇಂದ್ರದಲ್ಲಿ 20 ಅಭ್ಯಾಸಿಗಳಿಗೆ ಸೋದರ ಪ್ರಹ್ಲಾದ ಪಕ್ಕೀಕರ್ ಮತ್ತು ಸೋದರ ನಿಜಲಿಂಗಪ್ಪರವರು ಭಾಷಾಂತರಿಸಿದ ಕನ್ನಡ ಮಾಧ್ಯಮದಲ್ಲಿ ತರಬೇತಿಯನ್ನು ನಿರ್ವಹಿಸಿದರು. ಎಲ್ಲಾ ಅಭ್ಯಾಸಿಗಳೂ ಉತ್ಸಾಹದಿಂದ ಭಾಗವಹಿಸಿದರು ಹಾಗೂ ಪ್ರಸ್ತುತಪಡಿಸುತ್ತಿದ್ದವರ ಪ್ರಶ್ನೆಗಳಿಗೆ ಉತ್ತರಿಸಿದರು.

ಗುಲ್ಬರ್ಗಾ ಜಿಲ್ಲೆಯ ಸೇಡಂನಲ್ಲಿ ಆಗಸ್ಟ್ 30ರಂದು 39 ಅಭ್ಯಾಸಿಗಳು ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಸೋದರ ನಿಜಲಿಂಗಪ್ಪ ಅವರು ಕಾರ್ಯಕ್ರಮ ನಿರ್ವಹಿಸಿದರು. ಎಲ್ಲಾ ಅಭ್ಯಾಸಿಗಳೂ ಜಾಗರೂಕತೆಯಿಂದ ಕೇಳಿಸಿಕೊಂಡು ನಿರ್ವಾಹಕರು ಆಗಾಗ್ಗೆ ಅವರ ಜಾಗೃತಿಯನ್ನು ಅಳೆಯಲು ಕೇಳಿದ ಎಲ್ಲಾ ಪ್ರಶ್ನೆಗಳಿಗೂ ಉತ್ತರವಿತ್ತರು. ವಿವಿಧ ಪ್ರಶ್ನೆಗಳಿಗೆ ಸಂಶಯ ನಿವಾರಿಸಲ್ಪಟ್ಟಿತು.



ಕಾಕಿನಾಡ (ಆಂಧ್ರಪ್ರದೇಶ)ದಲ್ಲಿ ಸೆಪ್ಟೆಂಬರ್ 6ರಂದು ATP ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಈ ವಲಯದಲ್ಲಿ ಈ ರೀತಿಯದು ಇದೇ ಪ್ರಪ್ರಥಮವಾಗಿದ್ದಿತು. SMRTI ವಲಯ ಸಂಚಾಲಕರಾದ ಸೋದರ ಕೆ. ನಾಗೇಶ್ವರ ರಾವ್ ಅವರು ಕಾರ್ಯಕ್ರಮ ನಡೆಸಿಕೊಟ್ಟರು.

ಮಧ್ಯ ಪ್ರದೇಶದ ಗ್ವಾಲಿಯರ್ ಕೇಂದ್ರದಲ್ಲಿ 50 ಅಭ್ಯಾಸಿಗಳಿಗೆ ಸೆಪ್ಟೆಂಬರ್ 19ರಿಂದ 21ರವರೆಗೆ ಮೂರು ದಿನಗಳ ATP ಏರ್ಪಡಿಸಲಾಗಿತ್ತು. ಮಧ್ಯ ಪ್ರದೇಶದ ವಿವಿಧ ಕೇಂದ್ರಗಳಿಂದ ಬಂದಿದ್ದ ಬೋಧಕವರ್ಗದವರು, ತರಬೇತಿಯ ಉದ್ದೇಶ, ಆಧ್ಯಾತ್ಮಿಕತೆ ಅವಶ್ಯಕತೆ, ಸ್ವಯಂ ಸೇವೆ ಮತ್ತು ಗುರುಗಳ ಬಗ್ಗೆ ಪ್ರೇಮದಂತಹ ವಿಷಯಗಳ ಬಗ್ಗೆ ಉಪನ್ಯಾಸ ನೀಡಿದರು.'To be like the Master'(ಗುರುಗಳಂತಾಗಿರಿ) ಮತ್ತು 'Awaken Now'(ಈಗ ಎಚ್ಚೆತ್ತುಕೊಳ್ಳಿ) ಎಂಬ ಎರಡು ಡಿವಿಡಿಗಳನ್ನು ಪ್ರದರ್ಶಿಸಲಾಯಿತು. ಕಾರ್ಯಕ್ರಮದ ಅಂತ್ಯದಲ್ಲಿ ಅಭ್ಯಾಸಿಗಳು ತಮ್ಮ ಆಧ್ಯಾತ್ಮಿಕ ಯಾತ್ರೆಯನ್ನು ಪ್ರಾಮಾಣಿಕವಾಗಿ ಮಾಡುತ್ತೇವೆಂದು ಭರವಸೆ ಇತ್ತರು.

ಭಾನುವಾರ ಅಕ್ಟೋಬರ್ 11ರಂದು ಕೇರಳ ವಲಯದಲ್ಲಿನ ಅಲುವ ಆಶ್ರಮದಲ್ಲಿ ಸುಮಾರು ಇತ್ತೀಚೆಗೆ ಸಂಸ್ಥೆಗೆ ಸೇರಿದ 50 ಅಭ್ಯಾಸಿಗಳಿಗೆ ಮಲಯಾಳಂನಲ್ಲಿ ಒಂದು ತರಬೇತಿ ಕಾರ್ಯಕ್ರಮ ಏರ್ಪಡಿಸಲಾಗಿತ್ತು. ಸಹಜಮಾರ್ಗ ಸಾಧನೆಗೆ ಸಂಬಂಧಿಸಿದ ವಿವಿಧ ವಿಷಯಗಳನ್ನು ಪ್ರಸ್ತುತಪಡಿಸಲಾಯಿತು. ಸಂಶಯ ನಿವಾರಣೆಗೆ ಪ್ರತ್ಯೇಕವಾದ ಸಮಾವೇಶವಿದ್ದುದರಿಂದಾಗಿ ಅಭ್ಯಾಸಿಗಳು ಅತ್ಯುತ್ಸಾಹದಿಂದ ಭಾಗವಹಿಸಿದರು. ಅಭ್ಯಾಸಿಗಳು ಧ್ಯಾನ ಮತ್ತು ಶುದ್ಧೀಕರಣ, ಸ್ಮರಣೆ ಹಾಗೂ ಚಿಂತನೆ, ಗುರು ಮತ್ತು ದೇವರು, ಇವುಗಳ ನಡುವಣ ವ್ಯತ್ಯಾಸಗಳ ಬಗ್ಗೆ ಪ್ರಶ್ನೆಗಳನ್ನು ಕೇಳಿದರು. ಚಾರಿತ್ರ್ಯ ನಿರ್ಮಾಣದ ಬಗ್ಗೆ ಗುರುಗಳು ಇತ್ತೀಚೆಗೆ ಒತ್ತು ಕೊಟ್ಟಿರುವುದನ್ನು ಮತ್ತು ಅದು ಏಕೆ ನಮ್ಮ ವೈಯಕ್ತಿಕ ಹೊಣೆಯಾಗಿದೆ ಎಂಬುದನ್ನು ವಿವರಿಸಲಾಯಿತು.



ಚಿತ್ತಾಪುರ



ಸೇಡಂ



ಗ್ವಾಲಿಯರ್

ಈ ಎಲ್ಲಾ ಕೇಂದ್ರಗಳಲ್ಲೂ ಸಮಾನವಾಗಿ ಕಂಡು ಬಂದ ಅಂಶವೆಂದರೆ ಈ ತರಬೇತಿ ಕಾರ್ಯಕ್ರಮಗಳ ಹಿರಿಮೆ ಎಂದರೆ ಸಹಜಮಾರ್ಗ ಸಾಧನೆಯ ಬಗ್ಗೆ ಸಂಶಯ ನಿವಾರಣೆ. ಇದು ಹೊಸ ಅಭ್ಯಾಸಿಗಳಿಗಾಗಿ ಎಂದಿದೆಯಾದರೂ, ಸ್ವಲ್ಪಕಾಲದಿಂದ ಅಭ್ಯಾಸ ಮಾಡುತ್ತಿರುವ ಅಭ್ಯಾಸಿಗಳಿಗೂ ಅಧಿಕವಾಗಿ ಲಾಭವಾಗಿದೆ. ಸಾಧನೆಯನ್ನು ನಾವು (ಸರಿಯಾಗಿ) ಅರಿತುಕೊಳ್ಳಲು, ನೆನಪು ಮಾಡಿಕೊಳ್ಳಲು ಹಾಗೂ ಸುಧಾರಿಸಿಕೊಳ್ಳಲು ಮೂಲಭೂತ ತತ್ವಗಳತ್ತ ತಿರುಗುವುದು ಅವಶ್ಯಕವಾಗಿದೆ.



## ಎಚ್‌ಪಿಸಿ ನಿರ್ವಹಣಾಭಿವೃದ್ಧಿ ಶಿಕ್ಷಣಸಂಸ್ಥೆ, ಪುಣೆ

ಪುಣೆ ಜಿಲ್ಲೆಯ ಪಿಂಪ್ರಿ-ಚಿಂಚ್‌ವಾಡದ ಅಭ್ಯಾಸಿಗಳು ನಿಗಡಿಯ ಹಿಂದುಸ್ತಾನ್ ಪೆಟ್ರೋಲಿಯಂ ಕಾರ್ಪೋರೇಶನ್‌ನ ಸಿಬ್ಬಂದಿಗಾಗಿ 28 ಸೆಪ್ಟಂಬರ್‌ರಂದು ತರಬೇತಿ ಕಾರ್ಯಕ್ರಮವನ್ನು ನಿಯೋಜಿಸಿದ್ದರು. ಸೋದರ ಸಕ್ಸೇನಾರವರು 'ಸಮತೋಲನ ಜೀವನವನ್ನು ಹೇಗೆ ನಡೆಸಬೇಕು' ಎಂಬ ವಿಷಯದ ಬಗ್ಗೆ ಮಾತನಾಡಿದರು. ಸಹಜಮಾರ್ಗ ಸಾಧನೆಯನ್ನು ಕಾರ್ಯಕ್ರಮದಲ್ಲಿ ಭಾಗವಹಿಸಿದ 50 ಜನರಿಗೆ ಪ್ರಸ್ತುತಪಡಿಸಲಾಯಿತು ಮತ್ತು ಅವರ ವಿಚಾರಣೆಗಳಿಗೆ ಉತ್ತರಿಸಲಾಯಿತು.

## ಗುಂಪು ಅಭ್ಯಾಸ-ಇಂದೋರ್, ಮಧ್ಯಪ್ರದೇಶ



ಇಂದೋರ್ ಕೇಂದ್ರದಲ್ಲಿ ಸೆಪ್ಟಂಬರ್ 13ರಂದು ಬಾಬೂಜಿಯವರ 'ಮೆಸೇಜಸ್ ಯುನಿವರ್ಸಲ್' ಪುಸ್ತಕವನ್ನು ಗುಂಪಿನಲ್ಲಿ ಓದಲಾಯಿತು. ಸುಮಾರು 35 ಅಭ್ಯಾಸಿಗಳು ಈ ಕಾರ್ಯಕ್ರಮದಲ್ಲಿ ಪಾಲ್ಗೊಂಡರು. ಸೋದರ ತನ್ವರ್‌ರವರು ಪೂಜ್ಯ ಬಾಬೂಜಿಯವರ ಸಂದೇಶಗಳಿಂದ ಪಡೆದ ಜ್ಞಾನವನ್ನು ಹಂಚಿಕೊಂಡರು. ಸಮರ್ಪಣೆಯು ತೋರಿಕೆಗೆ ಮಾಡುವಂತಹದ್ದಾಗಲೀ ಅಥವಾ ಬಾಹ್ಯಾನುಕರಣೆಯ ಅರ್ಪಣೆಯಾಗಲೀ ಆಗಿರದೆ ನಮ್ಮ ಸಂಕಲ್ಪ ಮಾತ್ರದಿಂದಲೇ ಸಾಧ್ಯವೆಂದು ಎಲ್ಲಾ ಅಭ್ಯಾಸಿಗಳಿಗೆ ಮನವರಿಕೆಯಾಯಿತು. ಸಂದೇಶವೊಂದರಲ್ಲಿ ಗುರುಗಳು ಪ್ರತೀ ಅಭ್ಯಾಸಿಗೆ ನೀಡುವ ಆಂತರಿಕ ಉನ್ನತಿಯೊಂದಿಗೆ ಮಿಳಿತವಾಗುವಂತೆ ಅವನು ತನ್ನ ಗುಣಾಭಿವೃದ್ಧಿಯನ್ನು ಮಾಡಿಕೊಳ್ಳಬೇಕೆಂದು ಒತ್ತಿಹೇಳಲಾಗಿದೆ.

## ಸರಾಯ್‌ಗ್ರಾಮ್ ಮತ್ತು ವಿಂಧ್ಯಾನಗರ, ಮ.ಪ್ರ.

ಜಬಲ್ಪುರದ ಶಿಕ್ಷಕರ ತಂಡವು ಶ್ರವಣ-ದೃಶ್ಯ ಮಾಧ್ಯಮಗಳ ಪ್ರಸ್ತುತಿಗಳೊಂದಿಗೆ ಸಹಜಮಾರ್ಗದ ಪ್ರಮುಖ ತತ್ವಗಳನ್ನು ವಿವರಿಸುವ ಕಾರ್ಯಕ್ರಮವೊಂದನ್ನು ಸರಾಯ್‌ಗ್ರಾಮದಲ್ಲಿ ಸೆಪ್ಟಂಬರ್ 11 ರಂದು ಆಯೋಜಿಸಿದ್ದು ಇದರಲ್ಲಿ ಸುಮಾರು 30 ಅಭ್ಯಾಸಿಗಳು ಭಾಗವಹಿಸಿದರು. ಸೋದರಿ ಸುನೀತಾ ಶುಕ್ಲಾರವರು ಧ್ಯಾನ ಮತ್ತು ಹತ್ತು ನಿಯಮಗಳನ್ನು ವಿವರಿಸಿದರೆ, ಸೋದರಿ ಅರ್ಚನಾ ಕೇಸ್ಕರ್‌ರವರು ಪ್ರಾರ್ಥನೆ ಮತ್ತು ದಿನಚರಿ ದಾಖಲೆಯ ಬಗ್ಗೆ ಮಾತನಾಡಿದರು ಹಾಗೂ ಸೋದರಿ ಕೃಷ್ಣಾ ಪಾಂಡ್ಯರವರು ಶುದ್ಧೀಕರಣ ಮತ್ತು ಸತತ ಸ್ಮರಣೆಯನ್ನು ವಿವರಿಸಿದರು. ನಂತರ ಸೋದರ ಆರ್.ಕೆ. ವ್ಯಾಸ್‌ರವರೊಂದಿಗೆ ಪ್ರಶ್ನೋತ್ತರ ನಡೆಯಿತು.

ವಿಂಧ್ಯಾನಗರದಲ್ಲಿ 'ಸಹಜಮಾರ್ಗ-ಒಂದು ಪುನರಾವಲೋಕನ' ಎಂಬ ಕಾರ್ಯಕ್ರಮದಲ್ಲಿ ಸುಮಾರು 50 ಅಭ್ಯಾಸಿಗಳು ಭಾಗವಹಿಸಿದ್ದರು. ಸೋದರ ನಾಯಕ್‌ಜೀರವರು ತರಬೇತಿ ನೀಡಿದ ಮಕ್ಕಳು ಮೌಲ್ಯಗಳ ಮೇಲೆ ಆಧಾರಿತ ಪರಿಣಾಮಕಾರಿ ಪ್ರಸ್ತುತಿಯನ್ನು ನೀಡಿದರು. ಶಿಕ್ಷಕ ತಂಡವು ತಾವು ಕಲಿಸಲು ಹೊರಟಿದ್ದರೂ ತಾವೇ ಕಲಿಯುವಂತಾಗಿದ್ದು ಹೆಚ್ಚಿನದನ್ನು ಅನುಭವಿಸುವ ಧನ್ಯತಾ ಭಾವವನ್ನು ಅನುಭವಿಸಿದರು.



## ಉತ್ತರ ಮಹಾರಾಷ್ಟ್ರ ಭೇಟಿ

ಸೋದರ ವೈದ್ಯ, ಸೋದರ ಟಿಲ್ಲು ಮತ್ತು ಸೋದರ ಗಿರೀಶ್‌ರವರು ಕೆಲವು ಅಭ್ಯಾಸಿಗಳೊಡನೆ ಗುಜರಾತ್‌ನ ಗಡಿಭಾಗದಲ್ಲಿರುವ ಉತ್ತರ ಮಹಾರಾಷ್ಟ್ರದ ಕೆಲವು ಕೇಂದ್ರಗಳಿಗೆ ಸೆಪ್ಟಂಬರ್ 19 ಮತ್ತು 20ರಂದು ಭೇಟಿ ನೀಡಿದರು. ಅವರು ಸತ್ಸಂಗ ನಡೆಸಿಕೊಟ್ಟರು, ಸ್ಥಳೀಯ ತಂಡಗಳೊಡನೆ ಸಮಾಲೋಚನೆ ನಡೆಸಿದರು, ತರಬೇತಿ ಕಾರ್ಯಕ್ರಮವನ್ನು ಆಯೋಜಿಸಿದರು ಹಾಗೂ ಅನುಮಾನ ಮತ್ತು ಪ್ರಶ್ನೆಗಳನ್ನು ಪರಿಹರಿಸಲು ಚರ್ಚೆ ನಡೆಸಿದರು.

ತಂಡವು ನಾದರ್ಬಾರ್, ಜಲ್‌ಗಾಂವ್, ಭೂಸವಲ್‌ಗಳಿಗೆ ಭೇಟಿ ನೀಡಿದರು. ಪ್ರಯಾಣದ ಅವಧಿಯುದ್ದಕ್ಕೂ ಅವರು ಸತತ ಸ್ಮರಣೆಯಲ್ಲಿದ್ದರು ಮತ್ತು ಅವರ ಹೃದಯವು ಗುರುಗಳ ಮೇಲಿನ ಪ್ರೇಮ ಮತ್ತು ಕೃತಜ್ಞತೆಯಿಂದ ತುಂಬಿತ್ತು. ಈ ಭೇಟಿಯು ಆ ಎಲ್ಲಾ ಕೇಂದ್ರಗಳ ಅಭ್ಯಾಸಿಗಳಲ್ಲಿ ಉಲ್ಲಾಸ ಮತ್ತು ಸಂತೋಷಭರಿತ ವಾತಾವರಣ ಉಂಟು ಮಾಡಿತು.



## ಕರ್ನಾಟಕದ ಭದ್ರಾವತಿ ಆಶ್ರಮದ ಪ್ರಥಮ ವಾರ್ಷಿಕೋತ್ಸವ

ಶಿವಮೊಗ್ಗ ಜಿಲ್ಲೆಯ ಭದ್ರಾವತಿಯಲ್ಲಿ ಅಕ್ಟೋಬರ್ 11 ರಂದು ಮಿಷನ್ನಿನ ಪ್ರಥಮ ವಾರ್ಷಿಕೋತ್ಸವವನ್ನು ಆಚರಿಸಲಾಯಿತು. ಒಂದು ವರ್ಷದ ಹಿಂದೆ ಕೆಲವೇ ಅಭ್ಯಾಸಿಗಳಿದ್ದ ಈ ಕೇಂದ್ರವು ಈಗ 40ಕ್ಕೂ ಹೆಚ್ಚು ಅಭ್ಯಾಸಿಗಳನ್ನು ಹೊಂದಿದೆ. ಇದಕ್ಕೆ ಕಾರಣ ಸ್ಥಳೀಯ ಅಭ್ಯಾಸಿಗಳ ಉತ್ಸಾಹ, ಹೊರಕೇಂದ್ರಗಳ ಪ್ರಶಿಕ್ಷಕರ ಭೇಟಿಗಳು ಮತ್ತು ಎಲ್ಲಕ್ಕಿಂತ ಮುಖ್ಯವಾಗಿ ಗುರುಗಳ ಅನುಗ್ರಹ.

ಸತ್ಸಂಗದ ನಂತರ ಸೋದರ ಸಿ.ಆರ್.ಎನ್.ಮೂರ್ತಿ, ವಲಯಾಧಿಕಾರಿ ಸೋದರ ಬಿ.ಎಸ್.ರಾವ್ ಮತ್ತು ಸೋದರ ಶರತ್ ಹೆಗಡೆಯವರ ಉಪನ್ಯಾಸಗಳ ಪ್ರಭಾವದಿಂದ ಅಭ್ಯಾಸಿಗಳು ತಮ್ಮ ಮೇಲೆ ಗಮನಹರಿಸಿ ಪದ್ಧತಿಯ ಲಾಭ ಪಡೆಯಲು ಪ್ರೇರಿತರಾದರು. ಸ್ಥಳೀಯ ಅಭ್ಯಾಸಿಗಳು ತಮ್ಮ ಅನುಭವಗಳನ್ನು ಹಂಚಿಕೊಂಡರು ಮತ್ತು ಸಾಧನೆಯ ವಿವಿಧ ಅಂಶಗಳ ಮೇಲಿನ ಅನುಮಾನಗಳನ್ನು ಪರಿಹರಿಸಲು ಕಾಲ ಮೀಸಲಿಡಲಾಯಿತು. ಮಕ್ಕಳು ಹತ್ತು ನಿಯಮಗಳನ್ನಾಧರಿಸಿದ ಕಿರು ನಾಟಕವನ್ನು ಪ್ರಸ್ತುತ ಪಡಿಸಿದರು. ಈ ಸಭೆಯನ್ನು ಆಯೋಜಿಸಿದ ಭದ್ರಾವತಿಯ ಅಭ್ಯಾಸಿಗಳು ತಾವೇನು ಮಾಡಬಹುದೆನ್ನುವ ಆಲೋಚನೆಯಿಂದ ತಾವು ಮಿಷನ್ನಿಗೆ ನೀಡುವ ನೆರವನ್ನು ನೆನೆದು ಹರ್ಷಿಸಿದರು.

## ಮೌಲ್ಯಾಧಾರಿತ ಶಿಕ್ಷಣ ಪದ್ಧತಿಯ ಕಮ್ಮಟ, ಜೈಪುರ

ಆಗಸ್ಟ್ 23, 2009ರಂದು ಜೈಪುರದಲ್ಲಿ ನಡೆದ ಕಮ್ಮಟದಲ್ಲಿ ಸುಮಾರು 100 ಅಭ್ಯಾಸಿಗಳು ಭಾಗವಹಿಸಿದ್ದರು. ಪ್ರಾಥಮಿಕ ಶಾಲೆಯ ಮಕ್ಕಳಿಗೆ SMRTIನ ಪಠ್ಯಕ್ರಮದಲ್ಲಿ ನಮೂದಿಸಿದ ಉದಾಹರಣೆಗಳನ್ನು ಪ್ರಸ್ತುತಪಡಿಸಲಾಯಿತು. ಸ್ವಚ್ಛತೆ, ಪ್ರಾಮಾಣಿಕತೆ, ಸತ್ಯನುಡಿ, ಶಿಸ್ತು, ಸರಳ ಜೀವನ ಮತ್ತು ಉನ್ನತ ಆಲೋಚನೆ, ಸಮಯ ನಿರ್ವಹಣೆಯಂತಹ ಮೌಲ್ಯಗಳನ್ನು ಚಿತ್ರಗಳು ಮತ್ತು ಸ್ಲೈಡ್‌ಗಳ ಮೂಲಕ ಪರಿಣಾಮಕಾರಿಯಾಗಿ ವಿವರಿಸಲಾಯಿತು.



ಶ್ರೀ ರಾಮಚಂದ್ರ ಮಿಷನ್
ಎಖೋಸ್ ಇಂಡಿಯ
ವಲಯ ಚಟುವಟಿಕೆಗಳು
ನವೆಂಬರ್ 2009 ಆಂತರಿಕ ಪ್ರಸಾರಕ್ಕಾಗಿ ಮಾತ್ರ ಸಂಪುಟ 2 ಸಂಚಿಕೆ 6

## VBSE ತರಬೇತಿ– ಎರ್ನಾಕುಲಮ್, ಕೇರಳ



ಮಕ್ಕಳು ಭವಿಷ್ಯದಲ್ಲಿ ಪ್ರಪಂಚದ ನಾಗರಿಕರು ಮತ್ತು ನಾವು ಅವರಿಗೆ ನೀಡುವ ಮೌಲ್ಯಗಳು ಹೆಚ್ಚಿನದನ್ನು ನಿರ್ಧರಿಸುತ್ತವೆ. ಎರ್ನಾಕುಲಮ್ ಕೇಂದ್ರದಲ್ಲಿ 23 ಸೆಪ್ಟಂಬರ್‌ರಂದು VBSE ತರಬೇತಿ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಕಾರ್ಯಕ್ರಮದ ನಿರ್ವಹಣೆ ಮತ್ತು ಪ್ರಸ್ತುತಿಯು SMRTI ನ ವಲಯ ನಿರ್ವಾಹಕರಾದ ಸೋದರ ಎ. ಮಾಧವನ್‌ರವರದಾಗಿತ್ತು. 71 ಅಭ್ಯಾಸಿಗಳು ಮತ್ತು 13 ಮಕ್ಕಳು ಭಾಗವಹಿಸಿದ್ದರು. ಪಾರಸ್ಪರಿಕ ಚರ್ಚೆಯಲ್ಲಿ ಮಕ್ಕಳು ಸಂತೋಷದಿಂದ ಪಾಲ್ಗೊಂಡರು. ಅವರು ಮಿಷನ್ನಿನ ಪ್ರಾರ್ಥನೆಯನ್ನು ಹೇಳಿ ಕೆಲವು ಕ್ಷಣಗಳ ಕಾಲ ಕಣ್ಮುಚ್ಚಿ ಕುಳಿತುಕೊಂಡರು. ಮೌಲ್ಯಾಧಾರಿತ ಕಥೆಗಳನ್ನು ಹೇಳಲಾಯಿತು ಮತ್ತು ಅವುಗಳಿಂದ ಕಲಿಯುವಂತಹುದೇನೆಂದು ಮಕ್ಕಳನ್ನು ಕೇಳಲಾಯಿತು. ಅವರ ನವೀನ ದೃಷ್ಟಿಕೋನವು ಆಶ್ಚರ್ಯವನ್ನುಂಟುಮಾಡುವಂತಿತ್ತು.

ಸ್ವಯಂಸೇವಕರಿಗೆ VBSE ತರಗತಿಗಳನ್ನು ನಡೆಸುವುದರ ಬಗ್ಗೆ ತರಬೇತಿ ನೀಡಲಾಯಿತು. VBSE ತರಗತಿಗಳು ಜ್ಞಾನಾಭಿವೃದ್ಧಿಗಲ್ಲ, ಆದರೆ ಜಾಣತನವನ್ನು ಹೆಚ್ಚಿಸಲು ಆಗಿರುತ್ತವೆ. ಮಿಷನ್ನಿನ ಪ್ರಗತಿಯಲ್ಲಿ ಪಾಲ್ಗೊಳ್ಳಬೇಕೆನ್ನುವುದು ಮಕ್ಕಳ ಆಶಯವಾಗಿತ್ತು.

## ಲಖನೌ ಆಶ್ರಮದಲ್ಲಿ ಸಸ್ಯ ನೆಡುವಿಕೆ

ಈ ಮಳೆಗಾಲದಲ್ಲಿ ಸುಮಾರು 1000ಕ್ಕೂ ಅಧಿಕ ಸಸ್ಯಗಳನ್ನು ಲಖನೌ ಆಶ್ರಮದಲ್ಲಿ ನೆಡಲಾಯಿತು ಮತ್ತು ಇನ್ನೂ 200 ಫಲವೃಕ್ಷಗಳನ್ನು ನೆಡುವ ಯೋಜನೆಯಿದೆ.

ಲಖನೌ ಅಭಿವೃದ್ಧಿ ಪ್ರಾಧಿಕಾರ (LDA)ವು 300 ಸಸಿಗಳನ್ನು ಒದಗಿಸುವ ಮೂಲಕ ಈ ಕಾರ್ಯದಲ್ಲಿ ಕೈಗೂಡಿಸಿತು. 30 ಆಗಸ್ಟ್ 2009ರಂದು ಸುಭಾಷ್ ಪಬ್ಲಿಕ್ ಶಾಲೆ ಮತ್ತು ರಾಜಹಂಸ ಪಬ್ಲಿಕ್ ಶಾಲೆಯ 250 ವಿದ್ಯಾರ್ಥಿಗಳು ಆಶ್ರಮಕ್ಕೆ ಭೇಟಿ ನೀಡಿ ಈ ಚಟುವಟಿಕೆಯಲ್ಲಿ ಸಹಾಯ ಮಾಡಿದರು.

## ಕರ್ನಾಟಕದ ತಿಪಟೂರಿನಲ್ಲಿ ಪ್ರಾದೇಶಿಕ ಸಮಾರೋಹ

10 ಮತ್ತು 11 ಅಕ್ಟೋಬರ್‌ರಂದು 7 ಕೇಂದ್ರಗಳ ( ಹಾಸನ, ತುಮಕೂರು, ಮಧುಗಿರಿ, ಚಿ.ನಾ.ಹಳ್ಳಿ, ಹುಳಿಯಾರು, ಚಿಕ್ಕಮಗಳೂರು, ತಿಪಟೂರು) 250 ಅಭ್ಯಾಸಿಗಳು ತಿಪಟೂರಿನಲ್ಲಿ 'ಸ್ವ–ಮರುವಿಮರ್ಶೆ' ಎಂಬ ವಿಷಯದ ಮೇಲೆ ನಡೆದ 2 ದಿನದ ಸಭೆಯಲ್ಲಿ ಪಾಲ್ಗೊಂಡರು.

ಮೊದಲ ದಿನವು ಗುರುಗಳ ಇತ್ತೀಚಿನ ಉಪನ್ಯಾಸಗಳು ಮತ್ತು ಅಭ್ಯಾಸಿಗಳು ಕಾಲಕಾಲಕ್ಕೆ ತಮ್ಮ ಸ್ಥಿತಿಯ ಬಗ್ಗೆ ಗಮನ ಹರಿಸುವುದರ ಅಗತ್ಯವನ್ನು ತಿಳಿಸುವುದರಲ್ಲಿ ಕಳೆಯಿತು. ಸಂಜೆಯ ಸತ್ಸಂಗದ ನಂತರ ಸುಂದರ ವಿಸಿಡಿಯೊಂದನ್ನು (ಸೀ ಆಫ್ ಲವ್) ವೀಕ್ಷಿಸಲಾಯಿತು ಮತ್ತು ತದನಂತರ ಅಭ್ಯಾಸಿಗಳು ಸಹಜಮಾರ್ಗದಲ್ಲಿನ ತಮ್ಮ ಅನುಭವಗಳನ್ನು ಹಂಚಿಕೊಂಡರು.







ಎರಡನೇ ದಿನದಂದು 'ಸೇವೆಯ ಪ್ರಾಮುಖ್ಯತೆ' ಮತ್ತು ಕೇಂದ್ರಗಳಲ್ಲಿ ಉತ್ತಮ ತಂಡಗಳನ್ನು ಹೊಂದುವ ಅಗತ್ಯವನ್ನು ತಿಳಿಸಲಾಯಿತು. ಭವಿಷ್ಯದಲ್ಲಿ ಉತ್ತಮ ತಂಡದ ರಚನೆಗೆ ಪ್ರತೀ ಕೇಂದ್ರದ ಸಲುವಾಗಿ 1 ವರ್ಷದ ಕಾರ್ಯ ಯೋಜನೆಯನ್ನು ರಚಿಸಲಾಯಿತು. ಸಂಜೆಯ ಸತ್ಸಂಗದೊಡನೆ ಕಾರ್ಯಕ್ರಮವು ಸಮಾಪ್ತಿಯಾಯಿತು.

ಭಾಗಿಗಳಿಗೆ 2 ದಿನಗಳ ಕಾಲ ಆಶ್ರಮದಲ್ಲಿ ಸೊಗಸಾದ ಸಮಯ ಕಳೆಯಲು ಅವಕಾಶ ದೊರಕಿತು. ಗುರಿಯ ಮೇಲಿನ ಏಕಾಗ್ರತೆಯನ್ನು ಕಾಪಿಡಲು ಇಂತಹ ಸಮಾರೋಹಗಳನ್ನು ಆಗಾಗ ನಡೆಸುತ್ತಿರಬೇಕೆಂದು ಅವರು ಅಭಿಪ್ರಾಯ ಪಟ್ಟರು.

## ಜೀವನದಲ್ಲಿ ಧ್ಯಾನದ ಪ್ರಾಮುಖ್ಯತೆ, ಕಾಶೀಪುರ

ಸೆಪ್ಟಂಬರ್ 11ರಂದು ಚಂದ್ರಾವತಿ ಹುಡುಗಿಯರ ಪದವಿ ಕಾಲೇಜಿನಲ್ಲಿ ಶಿಕ್ಷಕರು, ಹಿರಿಯ ಬಿ.ಎಡ್ ವಿದ್ಯಾರ್ಥಿಗಳು ಮತ್ತು ಸ್ನಾತಕೋತ್ತರ ವಿದ್ಯಾರ್ಥಿಗಳನ್ನು ಸೇರಿದಂತೆ ಸುಮಾರು 110 ಜನರಿಗೆ 'ಜೀವನದಲ್ಲಿ ಧ್ಯಾನದ ಪ್ರಾಮುಖ್ಯತೆ' ವಿಷಯದ ಮೇಲೆ ಉಪನ್ಯಾಸವನ್ನು ನೀಡಲಾಯಿತು.

ಸೋದರ ಡಾ.ಅಶೋಕ್ ಟಂಡನ್‌ರವರು ವಿಷಯ ಪರಿಚಯ ಮಾಡುತ್ತಾ ಸಾಮಾನ್ಯ ಜನರ ಧ್ಯಾನದ ಬಗೆಗಿನ ತಿಳುವಳಿಕೆ ಮತ್ತು ಅದರ ವ್ಯತ್ಯಾಸವನ್ನು ಸರಳವಾಗಿ ತಿಳಿಸಿಕೊಟ್ಟರು. SRCMನ ಕಾರ್ಯದರ್ಶಿ ಸೋದರ ಆರ್. ಪಿ. ಉಮಾಶಂಕರ್‌ರವರು ಲೌಕಿಕ ಸಾಧನೆಗಾಗಿ ಧ್ಯಾನ ಮತ್ತು ಆಧ್ಯಾತ್ಮಿಕ ಒಳಿತಿಗಾಗಿ ಧ್ಯಾನಗಳ ನಡುವಿನ ವ್ಯತ್ಯಾಸಗಳನ್ನು ನಿಧಾನವಾಗಿ ವಿವರಿಸುತ್ತಾ ಪ್ರೇಕ್ಷಕರನ್ನು ಪರವಶಗೊಳಿಸಿದರು.

ವಿದ್ಯಾರ್ಥಿಗಳು ತಾವು ದಿನದಲ್ಲಿ ದಂಡ ಮಾಡಿದ ಸಮಯದೊಂದಿಗೆ ಸದ್ವಿನಿಯೋಗಿಸಿದ ಸಮಯವನ್ನು ಹೋಲಿಸಲು ಅವರು ಹೇಳಿದರು. ಮತ್ತೊಬ್ಬರನ್ನು ಹೀಯಾಳಿಸಲು ಕಳೆಯುವ ಸಮಯವನ್ನು ಹೇಗೆ ಧ್ಯಾನ ಮಾಡಲು ಉಪಯೋಗಿಸಬಹುದೆನ್ನುವುದನ್ನು ಅವರು ಹಾಸ್ಯಮಯ ಉದಾಹರಣೆಯೊಂದಿಗೆ ತಿಳಿಸಿದರು. ಉಲ್ಲಾಸಯುತ ಪ್ರಶ್ನೋತ್ತರ ಕಾರ್ಯಕ್ರಮದ ನಂತರ ಸೋದರ ಆಲೋಕ್‌ರವರು ಸಹಜಮಾರ್ಗದ ಬಗ್ಗೆ ಲಘುವಿವರ ನೀಡಿದರು. ಆಸಕ್ತಿಯುತ ಭಾಗಿಗಳಿಗೆ ಪುಸ್ತಕಗಳು, ಕಿರುಹೊತ್ತಿಗೆಗಳನ್ನು ನೀಡಿ ಹೆಚ್ಚಿನ ವಿವರಗಳಿಗೆ ಸ್ಥಳೀಯ ಪ್ರಶಿಕ್ಷಕರನ್ನು ಕಾಣಲು ತಿಳಿಸಲಾಯಿತು.

ಶ್ರೀ ರಾಮಚಂದ್ರ ಮಿಷನ್
ಎಖೋಸ್ ಇಂಡಿಯ
ವಲಯ ಚಟುವಟಿಕೆಗಳು

ನವೆಂಬರ್ 2009 ಆಂತರಿಕ ಪ್ರಸಾರಕ್ಕಾಗಿ ಮಾತ್ರ ಸಂಪುಟ 2 ಸಂಚಿಕೆ 6


## ಉನ್ನತ ಯುವಸಭೆ, ಬೆಂಗಳೂರು

2ರಿಂದ 4 ಅಕ್ಟೋಬರ್



ಈ ಸಭೆಯನ್ನ ಸಹಜಮಾರ್ಗದಲ್ಲಿ ಸಾಕಷ್ಟು ವರ್ಷಗಳನ್ನು ಕಳೆದಿರುವ, ತಮ್ಮ ಪ್ರೇರಣೆಯನ್ನು ಕಾಯ್ದುಕೊಳ್ಳಲು ಇನ್ನೂ ಹೆಚ್ಚಿನದನ್ನು ಬಯಸುವ ಯುವಜನರ ಸಲುವಾಗಿ ಆಯೋಜಿಸಲಾಗಿತ್ತು. (20–35 ವಯೋಮಾನದ) ಭಾಗಿಗಳನ್ನು ದಕ್ಷಿಣ ಕರ್ನಾಟಕದ ಕೇಂದ್ರದ ಮುಖ್ಯಸ್ಥರು ಅಥವಾ ಪ್ರಶಿಕ್ಷಕರಿಂದ ವಿಶೇಷವಾಗಿ ಆರಿಸಲಾಗಿತ್ತು. ಬಹುಪಾಲು ಭಾಗಿಗಳು ಮಿಷನ್ನಿನಲ್ಲಿ 3 ವರ್ಷಗಳಿಗಿಂತ ಹೆಚ್ಚು ಕಾಲ ಇರುವವರು.

ದಿನವು 4.30ರ ಧ್ಯಾನ, ವ್ಯಾಯಾಮ/ಯೋಗ ಮತ್ತು ಸತ್ಸಂಗದೊಡನೆ ಔಪಚಾರಿಕ ಕಾರ್ಯಕ್ರಮದ ಮೊದಲು ಪ್ರಾರಂಭವಾಗುತ್ತಿತ್ತು. ಎರಡು ಕಾರ್ಯಕ್ರಮಗಳ ನಂತರ ಆಟ ಮತ್ತು 2 ಘಂಟೆ ಸ್ವಯಂಸೇವೆಯನ್ನು ಹೊಂದಿರುತ್ತಿತ್ತು. ಕಾರ್ಯಕ್ರಮಗಳ ನಡುವೆ ಸಿಗುವ ಸಮಯದಲ್ಲಿ ಭಾಗಿಗಳು ಗುರುಗಳು, ಮಿಷನ್ ಮತ್ತು ಪದ್ಧತಿಯ ಆಳವಾದ ಅಂಶಗಳ ಬಗ್ಗೆ ಚಿಂತಿಸಲು ಅವಕಾಶವಿತ್ತು. ಅವರಲ್ಲಿ ಗುಂಪುಗಳ ನಡುವೆ ವಿಚಾರವಿನಿಮಯ, ಅನುಭವ ಹಂಚಿಕೆ ಮತ್ತು ದೃಷ್ಟಿಕೋನಗಳನ್ನು ಚರ್ಚಿಸಲು ಸಮಯ ನೀಡಲಾಯಿತು. 'ಒಬ್ಬ ಗುರು, ಒಂದು ಮಿಷನ್, ಒಂದು ಪದ್ಧತಿ', 'ಅರ್ಹನಾಗಲು ಸೇವೆಮಾಡು', 'ವಿಧೇಯತೆಯೇ ಆಧ್ಯಾತ್ಮದ ಬುನಾದಿ', 'ಆಂತರಿಕ ಜಗತ್ತಿನ ಶೋಧ', 'ಚಾರಿತ್ರ್ಯವಿಲ್ಲದ ಆಧ್ಯಾತ್ಮವು ಮರೀಚಿಕೆ' ಮತ್ತು 'ಸಹಜಮಾರ್ಗ ಮತ್ತು ನಾಳೆಯ ಪ್ರಪಂಚ' ಎಂಬ ಅನೇಕ ವಿಷಯಗಳನ್ನು ಚರ್ಚಿಸಲಾಯಿತು. ಭಾಗಿಗಳ ನಡುವೆ ಪ್ರೇಮ ಮತ್ತು ಭ್ರಾತೃತ್ವದ ಭಾವನೆಗಳು ಗಟ್ಟಿಯಾದವು.

ಭಾಗಿಗಳು ತಮ್ಮ ಕೇಂದ್ರಗಳಲ್ಲೂ ಇಂತಹ ಕಾರ್ಯಕ್ರಮಗಳನ್ನು ಪ್ರಾರಂಭಿಸುತ್ತಿರುವುದಾಗಿ ಹೇಳಿದರು. ಭಾಗಿಗಳು ಮತ್ತು ನಿರ್ವಾಹಕರ ನಡುವೆ ಮುಕ್ತ ಭಾವವಿದ್ದು ಅನಿಸಿಕೆಗಳ ಹಂಚಿಕೆ ಮತ್ತು ತಮ್ಮಲ್ಲಿ ಉತ್ತರ ಹುಡುಕುವ ಉತ್ಸಾಹವಿತ್ತು.

## ಉತ್ತರಾಖಂಡ ಪ್ರಶಿಕ್ಷಕರ ಸಭೆ

ಸೆಪ್ಟಂಬರ್ 20 ಮತ್ತು 21ರಂದು 'ಗುಣಮಟ್ಟ ಮತ್ತು ಸಂಖ್ಯೆಯ ಹೆಚ್ಚಳ' ಎಂಬ ವಿಷಯಾಧಾರಿತ ಸಭೆಯನ್ನು ಉತ್ತರಾಖಂಡ ವಲಯಕ್ಕಾಗಿ ಸತ್ಪೋಲ್‌ನಲ್ಲಿ ನಡೆಸಲಾಗಿದ್ದು 41 ಪ್ರಶಿಕ್ಷಕರು ಪಾಲ್ಗೊಂಡರು.

ಮೊದಲನೇ ದಿನದಂದು ವಲಯಾಧಿಕಾರಿ ಸೋದರ ಶುಫಾಲ್‌ರವರು ಚಟುವಟಿಕೆಗಳ ಮುನ್ನೋಟವನ್ನು ನೀಡಿದರು. ನಂತರ ಅವರು ಪ್ರತೀ ಕೇಂದ್ರದಲ್ಲಿ ಆಗಬೇಕಾದ ಸುಧಾರಣೆಗಳು ಮತ್ತು ಅದರ ವರದಿಯನ್ನು ಪ್ರಸ್ತುತ ಪಡಿಸಿದರು. ಮಾಹಿತಿಯನ್ನು ಪ್ರಶಿಕ್ಷಕರ ವರದಿ ಮತ್ತು ಸದಸ್ಯತ್ವ ಮಾಹಿತಿಯಿಂದ ತೆಗೆದುಕೊಳ್ಳಲಾಗಿತ್ತು. ಅವರು ಆಶ್ರಮಗಳ ಮತ್ತು ಧ್ಯಾನಮಂದಿರಗಳ ನಿರ್ವಹಣೆ ಮತ್ತು ಕೇಂದ್ರಕ್ಕೆ ಗುರುಗಳ ಭೇಟಿಗಳಂದು ತೆಗೆದುಕೊಳ್ಳಬೇಕಾದ ನಿರ್ದಿಷ್ಟ ಮಾನದಂಡಗಳನ್ನು ವಿವರಿಸಿದರು. ಎಲ್ಲಾ ಪ್ರಶಿಕ್ಷಕರಿಗೂ SMRTIನ ಅಭ್ಯಾಸಿ ತರಬೇತಿ ಕಾರ್ಯಕ್ರಮದ ಮೊದಲ ಹಂತವನ್ನು ಪ್ರಸ್ತುತಪಡಿಸಲಾಯಿತು.

ಸಾಯಂಕಾಲ ಸೋದರ ಅಶೋಕ್‌ರವರು ಕೇಂದ್ರದ ವಿವಿಧ ಚಟುವಟಿಕೆ ಮತ್ತು ಅತ್ಯುತ್ತಮ ಸಾಧನೆಗಳನ್ನು ಕಾಶೀಪುರಕೇಂದ್ರದ ಉದಾಹರಣೆಯೊಂದಿಗೆ ತಿಳಿಸಿದರು. ನಂತರ ಮುಕ್ತಸಭೆಗಳು ಮತ್ತು ಪೂರ್ಣ ದಿನದ ಕಾರ್ಯಕ್ರಮಗಳನ್ನು ಹೇಗೆ ನಡೆಸಿಕೊಡಬೇಕೆಂಬುದರ ಬಗ್ಗೆ ಪ್ರಸ್ತುತಿ ನೀಡಲಾಯಿತು.

ಎರಡನೇ ದಿನದಂದು 'ಇಂಟರ್‌ನೆಟ್‌ನ ಸಹಾಯದಿಂದ ಸಂವಹನ' ವನ್ನು ನಿರೂಪಿಸಿ



ತೋರಿಸಲಾಯಿತು. ಮಿಷನ್ನಿನ ವೆಬ್‌ಸೈಟ್‌ನ ವಿವಿಧ ವಿಭಾಗಗಳನ್ನು ಶೋಧಿಸುವುದನ್ನು ತೋರಿಸಲಾಯಿತು. ತದನಂತರ ಸೋದರ ಎ.ಪಿ.ದೊರೈರವರು ಸುರಕ್ಷೆಯ ಬಗ್ಗೆ ಪ್ರಸ್ತುತಿ ನೀಡಿ ವಿವರಿಸಿದರು.

ಗುಣಮಟ್ಟದ ಸುಧಾರಣೆ ಮತ್ತು ಸಂಖ್ಯೆಯಲ್ಲಿ ಸುಧಾರಣೆ ಎಂಬ ವಿಷಯಗಳ ಮೇಲೆ ಗುಂಪುಚರ್ಚೆ ಮತ್ತು ಪ್ರಸ್ತುತಿಗಳನ್ನು ಮಾಡಲಾಯಿತು. ನಂತರ ಗುರುಗಳು ಇತ್ತೀಚಿಗೆ ತಿರುಪ್ಪೂರಿನಲ್ಲಿ ಪ್ರಶಿಕ್ಷಕರಿಗೆ ನೀಡಿದ ಉಪನ್ಯಾಸದ ಪ್ರಧಾನ ಅಂಶಗಳನ್ನು ತಿಳಿಸುವುದರೊಂದಿಗೆ ಗುರುಗಳು ಚಿತ್ತೂರಿನಲ್ಲಿ ನೀಡಿದ ಸಂದೇಶವನ್ನು ಹಿಂದಿಯಲ್ಲಿ ಭಾಷಾಂತರಿಸಿ ಪ್ರಸ್ತುತ ಪಡಿಸಲಾಯಿತು.

ಕೊನೆಯಲ್ಲಿ ಸಂಖ್ಯೆಯ ಹೆಚ್ಚಳಕ್ಕೆ ಪ್ರಶಿಕ್ಷಕರು ಇನ್ನೂ ಹೆಚ್ಚು ಕಾರ್ಯನಿರತರಾಗಬೇಕು ಮತ್ತು ಗುಣಮಟ್ಟ ಸುಧಾರಿಸಲು ಅವರು ಹೃದಯಪೂರ್ವಕವಾಗಿ ಕೆಲಸ ಮಾಡಬೇಕು ಎಂದು ನಿರ್ಧಾರವಾಯಿತು. ಸಂಜೆಯ ಸತ್ಸಂಗದೊಡನೆ ಈ ಹಿನ್ನೋಟದ ಕಲಿಕಾ ಕಾರ್ಯಕ್ರಮವು ಸಮಾಪ್ತಿಯಾಯಿತು.

## ಆಂಧ್ರಪ್ರದೇಶದ ಜಗ್ಗಂಪೇಟ್‌ನಲ್ಲಿ ಮುಕ್ತಸಭೆ



ಆಂಧ್ರಪ್ರದೇಶದ ಉತ್ತರ 'ಸಿ' ವಲಯದ ಕಾಕಿನಾಡದಿಂದ 35 ಕಿ.ಮೀ.ದೂರದ ಜಗ್ಗಂಪೇಟೆಯು 5 ಲಕ್ಷ ಜನಸಂಖ್ಯೆ ಹೊಂದಿದ ವ್ಯಾಪಾರೀ ಪಟ್ಟಣವಾಗಿದೆ. ಇಲ್ಲಿ ರೈಸ್‌ಮಿಲ್‌ಗಳು ಮತ್ತು ಚಾವಣಿಯ ಟೈಲ್‌ಗಳನ್ನು ತಯಾರಿಸುವ ಸಣ್ಣ ಕೈಗಾರಿಕೆಗಳ ಚಟುವಟಿಕೆ ಹೆಚ್ಚು.

ಇಲ್ಲಿನ ಉಪಕೇಂದ್ರವು 2006ರಲ್ಲಿ ಬೆರಳೆಣಿಕೆಯ ಅಭ್ಯಾಸಿಗಳಿಂದ ಕಾರ್ಯ ಆರಂಭಿಸಿತು. ನಂತರ ಸಾಧನಾಪದ್ಧತಿ ಮತ್ತು ಇದರ ಸರಳತೆಯಿಂದ ಪ್ರಭಾವಿತರಾಗಿ ಸಂಖ್ಯೆಯು 40 ಸಾಧನಾನಿರತ ಅಭ್ಯಾಸಿಗಳಿಗೆ ಬಂದಿತು. ಸ್ಥಳೀಯ ಆಕಾಂಕ್ಷಿಗಳ ಅನುರೋಧದ ಮೇರೆಗೆ ಸೋದರ ಪಿ. ಸುಬ್ರಮಣ್ಯಂರವರು ಮುಕ್ತಸಭೆಯನ್ನು ಆಯೋಜಿಸಿದ್ದು 14 ಸೆಪ್ಟಂಬರ್ 2009ರಂದು ಎಲ್ಲಾ ವಯೋಮಾನದ ಸುಮಾರು 200 ಜನ ಆ ಸಂಜೆ ಭಾಗವಹಿಸಿದ್ದರು.

ವಿಷಯಗಳು ಧರ್ಮವೆಂದರೆ ಹೊರಗಿನ ಭಗವಂತ– ಆಧ್ಯಾತ್ಮವೆಂದರೆ ನಮ್ಮೊಳಗಿನ ಭಗವಂತ, ಆಧ್ಯಾತ್ಮದ ಅಗತ್ಯ ಮುಂತಾದವನ್ನು ಬಣ್ಣಿಸಿದವು. ಆಧ್ಯಾತ್ಮವು ಆಯ್ಕೆಯಲ್ಲ, ಅದು ಕಡ್ಡಾಯ ಮತ್ತು ಹೇಗೆ ಸಹಜಮಾರ್ಗವು ವ್ಯಕ್ತಿಯನ್ನು ಎಲ್ಲಾ ಪರಿಸ್ಥಿತಿಯಲ್ಲೂ ಶಾಂತಿಯಿಂದಿಡುವ ಮೂಲಕ ಪರಿಪೂರ್ಣ ಮಾನವನನ್ನಾಗಿ ಮಾಡುತ್ತದೆ ಎನ್ನುವುದರಿಂದ ಮುಕ್ತಾಯಗೊಳಿಸಲಾಯಿತು.

ಸೋದರ ಕೆ.ಯದುಸೂರ್ಯ ಮತ್ತು ಸೋದರಿ ಕೆ.ಜ್ಯೋತಿಯವರು ಈ ವಿಷಯಗಳ ಬಗ್ಗೆ ಮಾತನಾಡಿದರೆ ಸೋದರ ಡಿ.ಭಾಸ್ಕರರಾವ್ ಮತ್ತು ವಿ.ವೆಂಕಟರಾವ್‌ರವರು ಸಹಜಮಾರ್ಗ ಸಾಧನೆ ಆರಂಭ ಮಾಡಿದಾಗಿನಿಂದ ತಮ್ಮಲ್ಲಿ ಉಂಟಾದ ಬದಲಾವಣೆಗಳ ಬಗ್ಗೆ ಮಾತನಾಡಿದರು.

## ಕೊಯಮತ್ತೂರು ಕೇಂದ್ರ–ನವೀನ ಪೂರ್ಣದಿನದ ಕಾರ್ಯಕ್ರಮಗಳು

ಕೊಯಮತ್ತೂರು ಕೇಂದ್ರವು ಪ್ರತೀ ಭಾನುವಾರದ ಬದಲು ಮೊದಲಿನಂತೆ ತಿಂಗಳ ಪ್ರತೀ ಭಾನುವಾರದಂದು ಮಾತ್ರ ಪೂರ್ಣದಿನದ ಕಾರ್ಯಕ್ರಮ ನಡೆಸಲು ನಿರ್ಧರಿಸಿತು. ಇದರಿಂದ ಎಂದಿನ ಅದೇ ಸಣ್ಣ ಗುಂಪಿನ ಬದಲು ಹೆಚ್ಚಿನ ಅಭ್ಯಾಸಿಗಳು ಪಾಲ್ಗೊಳ್ಳಬಹುದು. ಹೊಸ ಮತ್ತು ಹಳೆಯ ಅಭ್ಯಾಸಿಗಳೆಲ್ಲರಿಗೂ ಆಸಕ್ತಿಯನ್ನುಂಟು ಮಾಡುವ ವಿಷಯಗಳನ್ನು ಯೋಚಿಸಿ ಸಿದ್ಧಗೊಳಿಸಲಾಯಿತು. ಆಧ್ಯಾತ್ಮಿಕತೆಯ ಹಾದಿಯಲ್ಲಿ ನಮ್ಮ ಪ್ರಗತಿಗೆ ಸಹಾಯ ಮಾಡುವ ಅಮೂಲ್ಯ ರತ್ನಗಳಲ್ಲೊಂದಾದ ಬಾಬೂಜಿಯವರ ಪುಸ್ತಕಗಳಲ್ಲೊಂದನ್ನು ಆಯ್ದುಕೊಳ್ಳಲಾಗಿತ್ತು. ಇಲ್ಲಿಯ ತನಕ ಮೂರು ಪುಸ್ತಕಗಳನ್ನು ಪೂರ್ಣಗೊಳಿಸಲಾಗಿದೆ – ಸಹಜಮಾರ್ಗಾನುಸಾರ ರಾಜಯೋಗದ ಪ್ರಭಾವ, ಹತ್ತು ನಿಯಮಗಳ ವ್ಯಾಖ್ಯಾನ ಮತ್ತು ಸತ್ಯೋದಯ. ಮುಂದಿನ ತಿಂಗಳುಗಳಲ್ಲಿ ಇನ್ನಿತರ ಪುಸ್ತಕಗಳನ್ನು ಕೈಗೆತ್ತಿಕೊಳ್ಳಲಾಗುವುದು. ಈ ಚಟುವಟಿಕೆಯು ಸ್ವಯಂಸೇವಕರಿಗೆ, ಉಪನ್ಯಾಸಕರಿಗೆ, ತರಬೇತಿ ನೀಡುವವರಿಗೆ ಫಲಕಾರಿ ಹಾಗೂ ಅಭ್ಯಾಸಿಗಳಲ್ಲಿಯೂ ಬಾಬೂಜಿಯವರ ಪುಸ್ತಕಗಳನ್ನು ಓದಲು ಹುರಿದುಂಬಿಸುತ್ತದೆ.

ಮತ್ತೊಂದು ಮುಖ್ಯ ಸಂಗತಿಯೆಂದರೆ ಸಾಧನಾ ಪದ್ಧತಿ, ಮಿಷನ್ನಿನ ಇತಿಹಾಸ, ಗುರು ಪರಂಪರೆಯ ಜೀವನ ಮುಂತಾದವುಗಳ ಆಧಾರಿತ ಸಹಜಮಾರ್ಗದ ಮೇಲಿನ ಕ್ವಿಜ್.

'ಗುರುಗಳು ಸಿಂಹಗಳನ್ನು ಬಯಸುತ್ತಾರೆ, ಕುರಿಗಳನ್ನಲ್ಲ'ದಂತಹ ಸಹಜ ಮಾರ್ಗದ ಅನೇಕ ಮುಖ್ಯ ಉಲ್ಲೇಖಗಳನ್ನು ಗುಂಪುಚರ್ಚೆಯ ವಿಷಯವನ್ನಾಗಿ ಆರಿಸಿಕೊಳ್ಳಲಾಗುತ್ತದೆ ಮತ್ತು ನಂತರ ಗುರುಗಳು ಅದರ ಬಗ್ಗೆ ಏನು ಹೇಳಿದ್ದಾರೆ ಎಂದು ತಿಳಿಯಲು ಅವರ ಸಾಹಿತ್ಯವನ್ನು ಓದಲಾಗುತ್ತದೆ.

## ಉತ್ತರ ಕರ್ನಾಟಕದ ಮುಕ್ತಸಭೆಗಳು

ಬೀದರ್ ಜಿಲ್ಲೆಯ ಬಸವಕಲ್ಯಾಣದ ಬಸವೇಶ್ವರ ಆಂಗ್ಲ ಮಾಧ್ಯಮ ಶಾಲೆಯಲ್ಲಿಅಕ್ಟೋಬರ್ 1ರಂದು ಸಭೆಯೊಂದನ್ನು ಆಯೋಜಿಸಲಾಗಿತ್ತು. ಮುಖ್ಯೋಪಾಧ್ಯಾಯಿನಿ ಶ್ರೀಮತಿ ನಿರ್ಮಲಾ ಶೇಟ್ಕಾರ್‌ರವರೊಂದಿಗೆ 30 ಪ್ರೌಢಶಾಲಾ ಶಿಕ್ಷಕರು ಹಾಜರಿದ್ದರು. ಸೋದರ ಶ್ರೀಕಾಂತ್ ಜೋಷಿಯವರು 'ಜೀವನದಲ್ಲಿ ಆಧ್ಯಾತ್ಮದ ಅಗತ್ಯ' ಎಂಬ ವಿಷಯದ ಬಗ್ಗೆ ಹಿಂದಿಯಲ್ಲಿ ಮಾತನಾಡಿದರು. ಸೋದರ ಮಲ್ಲಿಕಾರ್ಜುನ ಉಪ್ಪಿನ್‌ರವರು ಗುರು, ಮಿಷನ್ ಮತ್ತು ಪದ್ಧತಿಯ ಬಗ್ಗೆ ಮಾತನಾಡಿದರು. ಎರಡೂ ಉಪನ್ಯಾಸಗಳು ಪರಿಣಾಮಕಾರಿಯಾಗಿದ್ದವು. ಆಸಕ್ತರಿಗೆ ಕಿರುಪುಸ್ತಿಕೆಗಳನ್ನು ಹಂಚಲಾಯಿತು.

ಗುಲ್ಬರ್ಗಾ ಜಿಲ್ಲೆಯ ಚಿತ್ತಾಪುರದಲ್ಲಿ 30 ಆಕಾಂಕ್ಷಿಗಳ ಸಲುವಾಗಿ ಮತ್ತೊಂದು ಸಭೆಯನ್ನು ಅಕ್ಟೋಬರ್ 11 ರಂದು ನಡೆಸಲಾಯಿತು. ಸೋದರ ದೇವೇಂದ್ರಪ್ಪನವರು ಪ್ರೇಕ್ಷಕರನ್ನು ಸ್ವಾಗತಿಸಿದರು. ಸೋದರ ಗಜೇಂದ್ರ ಸಿಂಗ್‌ರವರು 'ಆಧ್ಯಾತ್ಮದ ಅಗತ್ಯ'ದ ಬಗ್ಗೆ ಹಿಂದಿಯಲ್ಲಿ ಮಾತನಾಡಿದರು. ಸೋದರ ರಾಜು ಕಾಶಂಪುರ್‌ಕರ್‌ರವರು 'ಗುರು, ಮಿಷನ್ ಮತ್ತು ಪದ್ಧತಿ'ಯ ಬಗ್ಗೆ ಕನ್ನಡದಲ್ಲಿ ಮಾತನಾಡಿದರು.


ಸುಮಾರು 30 ರೈಲ್ವೆ ನೌಕರರು ಗುಲ್ಬರ್ಗಾ ರೈಲ್ವೆ ನಿಲ್ದಾಣದ ಸ್ಟೇಶನ್ ಮಾಸ್ಟರರ ಕೋಣೆಯಲ್ಲಿ ಅಕ್ಟೋಬರ್ 11 ರಂದು ಒಟ್ಟುಗೂಡಿದ್ದರು. ಸೋದರ ಗಜೇಂದ್ರ ಸಿಂಗ್‌ರವರು ಅಧ್ಯಾತ್ಮ ಮತ್ತು ಸಹಜಮಾರ್ಗದ ಬಗ್ಗೆ ಕಿರು ಪರಿಚಯ ನೀಡಿದರು. ಸೋದರ ಶ್ರೀಕಾಂತ್ ಜೋಷಿಯವರು ಸಹಜಮಾರ್ಗ ಮತ್ತು ನಮ್ಮ ಮಿಷನ್ನಿನ ಕುರಿತು ಹಿಂದಿಯಲ್ಲಿ ಮಾತನಾಡಿದರು. ಸೋದರ ಮಹೇಶ್ ದೇಶಪಾಂಡೆಯವರು ನಮ್ಮ ಗುರು ಪರಂಪರೆಯ ಬಗ್ಗೆ ಮಾತನಾಡಿ ಕಾರ್ಯಕ್ರಮವನ್ನು ಮುಕ್ತಾಯಗೊಳಿಸಿದರು.







# ಹೊಸ ಪ್ರಕಟನೆಗಳು

'ಶ್ರೀರಾಮಚಂದ್ರರ ಸಮಗ್ರ ಕೃತಿಗಳು'– ಆಂಗ್ಲ ಭಾಷೆಯಲ್ಲಿ ಪುನರ್ಮುದ್ರಣ. ಈ ವಿಶೇಷ ಆವೃತ್ತಿಯು 3 ಸಂಪುಟಗಳ ಪೆಟ್ಟಿಗೆಯಲ್ಲಿದೆ.





ನನ್ನ ಗುರುದೇವ ಮರಾಠಿ





ಹಾರ್ಟ್ ಸ್ಪೀಕ್ 2003




ಹೃದಯವಾಣಿ 2004 ಸಂಪುಟ 2




ಸಹಜಮಾರ್ಗದ ಸಿದ್ಧಾಂತಗಳು–11 , ತಮಿಳು





ಸಹಜಮಾರ್ಗಾನುಸಾರ ರಾಜಯೋಗದ ಪ್ರಭಾವ ಸ್ಪ್ಯಾನಿಷ್




ಸಹಜಮಾರ್ಗದ ಹತ್ತು ನಿಯಮಗಳ ವ್ಯಾಖ್ಯಾನ– ವಿಶೇಷ ಆವೃತ್ತಿ, ಹಿಂದಿ




ಸತ್ಯೋದಯ ವಿಶೇಷ ಆವೃತ್ತಿ




ಹಾರ್ಟ್ ಟು ಹಾರ್ಟ್ ಸಂ–1 ಮರಾಠಿ









## ಬಾಬೂಜಿ ಸ್ಮಾರಕ ಆಶ್ರಮ, ಮುಂಬೈ

ದೇಶದ ವಾಣಿಜ್ಯ ಕೇಂದ್ರವಾದ ಮುಂಬೈನ ಆಶ್ರಮವನ್ನು ಪೂಜ್ಯ ಗುರುಗಳು ಫೆಬ್ರವರಿ 6, 2004ರ ಬಸಂತಪಂಚಮಿಯಂದು ಉದ್ಘಾಟಿಸಿದರು. ಮಹಾರಾಷ್ಟ್ರದ ರಾಯಗಡ ಜಿಲ್ಲೆಯ ಪನ್ವೇಲ್‌ನಲ್ಲಿ ಈ ಆಶ್ರಮವಿರುವುದರಿಂದ ಇದು ಪನ್‌ವೇಲ್ ಆಶ್ರಮವೆಂದೇ ಜನಜನಿತವಾಗಿದೆ. ಮುಂಬೈನಿಂದ 22 ಕಿ.ಮೀ. ದೂರವಿರುವ ಪನ್ವೇಲ್ ಪುಣೆ–ಮುಂಬೈ ಎಕ್ಸ್‌ಪ್ರೆಸ್‌ವೇ ಬಳಿ ಇದೆ. ಈ ಆಶ್ರಮವು 0.75 ಎಕರೆ ವಿಸ್ತಾರವಾಗಿದ್ದು ಚಂಗುಕಾಣಾ ಠಾಕುರ್ ಪ್ರೌಢಶಾಲೆಯ ಎದುರಿನಲ್ಲಿದೆ. ಇದು ಪನ್ವೇಲ್ ರೈಲ್ವೆ ನಿಲ್ದಾಣದಿಂದ ನಡೆದು ಹೋಗುವಷ್ಟು ಸಮೀಪದಲ್ಲಿದೆ.

ಮುಂಬೈನ ಆಶ್ರಮದ ನಿರ್ಮಾಣದಲ್ಲಿ ಉಂಟಾದ ಅತಿ ದೊಡ್ಡ ಸವಾಲೆಂ ದರೆ ಆಸ್ತಿ ಬೆಲೆಯೇರಿಕೆ. ಅಭ್ಯಾಸಿಗಳ ಸತತ ಪ್ರಯತ್ನ, ಗುರುಗಳ ಪ್ರೇರಣೆ ಮತ್ತು ದೃಢ ಯತ್ನದ ಪರಿಣಾಮವಾಗಿ ಇಂದು ಈ ಆಶ್ರಮವು ಕಂಗೊಳಿಸುತ್ತಿದೆ.

ಗುರುಗಳು ಜನವರಿ 24, 1999ರಂದು ಪನ್ವೇಲ್ ರೈಲ್ವೆ ನಿಲ್ದಾಣದ ಬಳಿಯ ಜಾಗವನ್ನು ನಿರ್ಣಯಿಸಿದರು. ಅವರು ಆ ಜಾಗದಲ್ಲಿ ಸತ್ಸಂಗವನ್ನು ನಡೆಸಿಕೊಟ್ಟು ಇದೇ ಆಶ್ರಮದ ಜಾಗವೆಂದು ದೃಢಪಡಿಸಿದಾಗ ಅಭ್ಯಾಸಿಗಳಲ್ಲಿ ಅತ್ಯುನ್ನತ ತೃಪ್ತಿಯ ಭಾವವುಂಟಾಯಿತು. ಗುರುಗಳು ಇದನ್ನು ಬಾಬೂಜಿ ಮೆಮೋರಿಯಲ್ ಆಶ್ರಮ(BMA )ವೆಂದು ಕರೆದರು ಹಾಗೂ ಇದು ದೇಶದ ಇನ್ನಿತರ 5 BMA ಗಳಲ್ಲಿ ಒಂದಾಗಿರುವುದು.

ಅವರ ಜೊತೆ ಕೆಲಸ ಮಾಡುವ ಭಾಗ್ಯ ಪಡೆದ ಅನೇಕ ಅಭ್ಯಾಸಿಗಳ ನೆರವಿನಿಂದ ಆಶ್ರಮದ ನಿರ್ಮಾಣವು ಒಂದೂವರೆ ವರ್ಷದಲ್ಲಿ ಪೂರ್ಣಗೊಂಡಿತು. ಗುರುಗಳು ಆಶ್ರಮವನ್ನು ಫೆಬ್ರವರಿ 6, 2004ರಂದು ಉದ್ಘಾಟಿಸಿದರು.

ಆಶ್ರಮವು ನೆಲಮಹಡಿಯಲ್ಲಿನ ಗುರುಗಳ ಕಾಟೇಜ್, ಊಟದಮನೆ, ಅಡುಗೆ ಕೋಣೆ, ಮಹಿಳೆಯರ ವಸತಿ, ಮೊದಲನೇ ಮಹಡಿಯಲ್ಲಿ ಗಂಡಸರ ವಸತಿ ಮತ್ತು ಹಂಚಿಕೆಯಾದ ಕೋಣೆಗಳು, ಎರಡನೇ ಮಹಡಿಯಲ್ಲಿ ಧ್ಯಾನಮಂದಿರವನ್ನೊಳಗೊಂಡಂತೆ ಎರಡು ಮಜಲಿನ ಕಟ್ಟಡವಾಗಿದೆ. CIDCO ದಿಂದ ನಿರ್ವಹಣೆ ಮತ್ತು ಅಭಿವೃದ್ಧಿಗೆ ಆಶ್ರಮಕ್ಕೆ ನೀಡಲ್ಪಟ್ಟ ಒಂದು ಎಕರೆಯಷ್ಟು 'ಹಸಿರು ವಲಯ'ವಿದೆ. ಎರಡನೇ ಮಹಡಿಯ ಧ್ಯಾನಮಂದಿರದ ಪಕ್ಕದಲ್ಲಿ ಹೊಸ ಗುರುಗಳ ಕಾಟೇಜ್ ಮತ್ತು ಹೊಸ ಕೋಣೆಗಳ ನಿರ್ಮಾಣದ ಯೋಜನೆಯನ್ನು ಗುರುಗಳು ಇತ್ತೀಚೆಗೆ ಮಂಜೂರು ಮಾಡಿದರು.

ಮುಂಬೈ ಮತ್ತು ಅದರ ಸುತ್ತಮುತ್ತಲಿನ ಜನಜೀವನವು ಅತಿ ವ್ಯಸ್ತ ಮತ್ತು ಅವಿಶ್ರಾಂತವಾಗಿದೆ. ಸ್ಥಳೀಯ ಅಭ್ಯಾಸಿಗಳಿಗೆ ತಮ್ಮ ದೈನಂದಿನ ಜಂಜಡಗಳನ್ನು ಮರೆತು ಪೂಜ್ಯ ಗುರುಗಳ ದಿವ್ಯಸನ್ನಿಧಿಯಲ್ಲಿ ಶಾಂತಿ ಪಡೆಯಲು ಇದು ಉತ್ತಮ ಸ್ಥಳವಾಗಿದ್ದು ಅವರು ಆಶ್ರಮದಲ್ಲಿ ಆದಷ್ಟು ಸಮಯ ಕಳೆಯಲು ಇಚ್ಛಿಸುತ್ತಾರೆ.














**To download or subscribe to this newsletter, please visit http://www.sahajmarg.org/newsletter/india**
**For feedback, suggestions and news articles please send email to in.newsletter@srcm.org**

© 2009 Shri Ram Chandra Mission ("SRCM"). All rights reserved.
"Shri Ram Chandra Mission", "Sahaj Marg", "SRCM", "Constant Remembrance" and the Mission's Emblem are registered Trademarks of Shri Ram Chandra Mission.This Newsletter is intended exclusively for the members of SRCM. The views expressed in the various articles are provided by various volunteers and are not necessarily those of SRCM.